## ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 45 ಎಸ್‌ಆರ್‌ಪಿ2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:06-02-2023.

## ಸುತ್ತೋಲೆ

ವಿಷಯ: 7ನೇ ರಾಜ್ಯ ವೇತನ ಆಯೋಗವು ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ಸಂಬಂಧ ಬಿಡುಗಡೆ ಮಾಡಿರುವ ಪ್ರಶ್ನಾವಳಿಗಳಿಗೆ, ಸರ್ಕಾರದ ವಿವಿಧ ಇಲಾಖೆಗಳು / ಸಂಸ್ಥೆಗಳು, ನೌಕರರ ಸಂಘಗಳು ಮತ್ತು ಸರ್ಕಾರದ ನೌಕರರುಗಳು ಆಯೋಗಕ್ಕೆ ಉತ್ತರಗಳನ್ನು ಹಾಗೂ ಮನವಿಗಳನ್ನು ಸಲ್ಲಿಸುವಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನದ ಕುರಿತಂತೆ ಮಾರ್ಗಸೂಚಿಗಳನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: 1. ದಿನಾಂಕ: 19-11-2022ರ ಸರ್ಕಾರಿ ಆದೇಶ ಸಂಖ್ಯೆ: ಆಇ 45 ಎಸ್‌ಆರ್‌ಪಿ 2022.

2.ದಿನಾಂಕ: 17-01-2023ರ ಅ.ಜ್ಞಾ. ಸಂ:ರಾವೇಆ/1/2023.

3. ಕಾರ್ಯದರ್ಶಿ, 7ನೇ ರಾಜ್ಯ ವೇತನ ಆಯೋಗ ಇವರ ಪತ್ರ ಸಂ: ರಾವೇಆ/1/2023 ದಿನಾಂಕ: 24-01-2023.

*****

ರಾಜ್ಯ ಸರ್ಕಾರದ ನೀತಿಯಂತೆ, ಮೇಲೆ ಉಲ್ಲೇಖ(1)ರ ದಿನಾಂಕ:19-11-2022ರ ಸರ್ಕಾರಿ ಆದೇಶದಲ್ಲಿ, ರಾಜ್ಯ ಸರ್ಕಾರಿ ನೌಕರರ (ಯುಜಿಸಿ/ಎಐಸಿಟಿಇ/ಐಸಿಎಆರ್/ಎನ್‌ಜೆಪಿಸಿ ವೇತನ ಶ್ರೇಣಿ ಹೊಂದಿರುವವರನ್ನು ಹೊರತುಪಡಿಸಿ) ಅನುದಾನಿತ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಬೋಧಕೇತರ ಸಿಬ್ಬಂದಿಗಳ ವೇತನ ರಚನೆಯನ್ನು ಪರಿಶೀಲಿಸಿ, ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಲು, 7ನೇ ರಾಜ್ಯ ವೇತನ ಆಯೋಗವನ್ನು ರಚಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

2. ಪ್ರಸ್ತುತ ರಾಜ್ಯ ವೇತನ ಆಯೋಗವು, ಮೇಲೆ ಉಲ್ಲೇಖ(2)ರ ದಿನಾಂಕ: 17-01-2023ರ ಅಧಿಕೃತ ಜ್ಞಾಪನದಲ್ಲಿ, ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆಗಳು ಮತ್ತು ಇತರೆ ಸೇವಾ ನಿಬಂಧನೆಗಳ ಪರಿಷ್ಕರಣೆ ಕುರಿತಂತೆ ವಿವರವಾದ ಪ್ರಶ್ನಾವಳಿಗಳನ್ನು ಬಿಡುಗಡೆ ಮಾಡಿ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಣೆಯನ್ನೂ ಸಹ ಮಾಡಿರುತ್ತದೆ. ಆಯೋಗದ ಪ್ರಶ್ನಾವಳಿಗಳು ವಿಸ್ತೃತವಾಗಿದ್ದು, ಇವುಗಳಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಪರಿಶೀಲಿಸಲು ವಿವರವಾದ ಅಧ್ಯಯನದ ಅವಶ್ಯಕತೆ ಇರುವುದನ್ನು ಸರ್ಕಾರವು ಮನಗಂಡಿರುತ್ತದೆ.

3. ವೇತನ ಆಯೋಗವು ತನ್ನ ಕಾರ್ಯಕಲಾಪಗಳನ್ನು ನಡೆಸಲು ಸರ್ಕಾರದ ವಿವಿಧ ಇಲಾಖೆಗಳು/ ಸ್ಥಳೀಯ ಸಂಸ್ಥೆಗಳು/ನಿಗಮ/ಮಂಡಳಿಗಳು ಹಾಗೂ ರಾಜ್ಯ ಸರ್ಕಾರದ ಯಾವುದೇ ಅಂಗ ಸಂಸ್ಥೆಗಳಿಂದ ಮಾಹಿತಿಗಳು ಮತ್ತು ದಸ್ತಾವೇಜುಗಳನ್ನು ಪರಿಶೀಲಿಸುವ ಅವಶ್ಯಕತೆ ಇರುತ್ತದೆ. ಪರಿಶೀಲನಾರ್ಹ ಅಂಶಗಳ ಕುರಿತಂತೆ, ಆಯೋಗವು ಬಯಸುವ ವಿಷಯ ಮತ್ತು ಅಧಿಕೃತ ಮಾಹಿತಿಗಳ ಬಗ್ಗೆ ಸೂಕ್ತ ದಾಖಲೆ/ಮಾಹಿತಿಗಳನ್ನು ಪಡೆಯಲು ಆಯೋಗವು ಸರ್ಕಾರಿ ನೌಕರರು/ಪರಿಣಿತರು/ ಸಾರ್ವಜನಿಕರನ್ನು ಆಹ್ವಾನಿಸಿ ಅಧ್ಯಯನ ನಡೆಸಬೇಕಾಗಿರುತ್ತದೆ. ತನ್ನ ಕಾರ್ಯ ವ್ಯಾಪ್ತಿಯ ಪರಿಶೀಲನಾಂಶಗಳ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು ಮತ್ತು ಸರ್ಕಾರದ ಇತರ ಅಧಿಕಾರಿಗಳ ಅಭಿಪ್ರಾಯಗಳನ್ನು ಸಹ ಆಯೋಗವು ಕೋರಬಹುದಾಗಿರುತ್ತದೆ.

4. ಆದ್ದರಿಂದ, ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಆಯೋಗಕ್ಕೆ ಉತ್ತರಗಳನ್ನು ಸಲ್ಲಿಸುವ ಸಂಬಂಧದಲ್ಲಿ ಒಂದು ನಿರ್ದಿಷ್ಟ ಕಾರ್ಯವಿಧಾನವನ್ನು ಅನುಸರಿಸುವಂತೆ ಸೂಚನೆಗಳನ್ನು ನೀಡುವುದು ಅಗತ್ಯವೆಂದು ಪರಿಗಣಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಕೋರಲಾಗಿದೆ:

(1) ವಾಸ್ತವಿಕ ಹಾಗೂ ಸಾಂದರ್ಭಿಕ ಮಾಹಿತಿ ಮೊದಲಾದವುಗಳನ್ನು ಆಯೋಗಕ್ಕೆ ಒದಗಿಸುವಲ್ಲಿ ಇಲಾಖೆಗಳಿಗೆ ಸಹಕರಿಸಲು ಮತ್ತು ಆಯೋಗದ ವ್ಯಾಪ್ತಿಗೆ ಬರುವ ಪರಿಶೀಲನಾರ್ಹ ಅಂಶಗಳಿಗೆ ಸಂಬಂಧಿಸಿದಂತೆ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರತಿಯೊಬ್ಬ ಸರ್ಕಾರಿ ನೌಕರನಿಗೂ ಪೂರ್ಣ ಅವಕಾಶವನ್ನು ಕಲ್ಪಿಸಲು ಈ ಮುಂದಿನ ಸೂಚನೆಗಳನ್ನು ಮಾರ್ಗದರ್ಶನಕ್ಕಾಗಿ ನೀಡಲಾಗಿದೆ:-

(ಅ)ಆಯೋಗಕ್ಕೆ ಅಗತ್ಯವಾಗಬಹುದಾದ ವಾಸ್ತವಿಕ ಮತ್ತು ಸಾಂದರ್ಭಿಕ ಮಾಹಿತಿಗಳು ಮತ್ತು ಇತರೆ ದಾಖಲೆಗಳನ್ನು ಇಲಾಖೆಗಳು ಒದಗಿಸಬಹುದು.

(ಆ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ತಮ್ಮ ತಿಳುವಳಿಕೆ ಮತ್ತು ಅನುಭವದ ಆಧಾರದ ಮೇಲೆ ಅವರ ಅಭಿಪ್ರಾಯಗಳನ್ನು ಆಯೋಗದ ಗಮನಕ್ಕೆ ತರಬಹುದಾಗಿರುತ್ತದೆ.

(ಇ) ಸಚಿವಾಲಯದ ಇತರೆ ಅಧಿಕಾರಿಗಳು ಅಂದರೆ ವಿಶೇಷ ಕಾರ್ಯದರ್ಶಿಗಳು / ಸಹ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ಅವರ ಕಾರ್ಯವ್ಯಾಪ್ತಿಯೊಳಗೆ ಬರುವ ವಿಷಯಗಳ ಬಗ್ಗೆ ಮೌಖಿಕವಾಗಿ ಅಥವಾ ಬರವಣಿಗೆ ಮೂಲಕ ಆಯೋಗದ ಮುಂದೆ ಪ್ರಸ್ತಾವನೆ ಸಲ್ಲಿಸಬಹುದು.

(ಈ) ಸರ್ಕಾರಿ ನೌಕರನು ಅವನ/ವಳ ವೈಯಕ್ತಿಕ ಕುಂದುಕೊರತೆಗಳನ್ನು ಹೊರತುಪಡಿಸಿ, ಅವರ ವೈಯಕ್ತಿಕ ಸಾಮರ್ಥ್ಯದಲ್ಲಿ ಪ್ರತಿಯೊಬ್ಬ ಸರ್ಕಾರಿ ನೌಕರನೂ ಆಯೋಗದ ಕಾರ್ಯಗಳಿಗೆ ಅನುಕೂಲವಾಗುವಂತಹ ಮನವಿ/ದಾಖಲೆ ಮುಂತಾದವುಗಳನ್ನು ಸಲ್ಲಿಸಬಹುದು.

(ಉ) ಆಯೋಗವು ಬಯಸಿದಲ್ಲಿ ಹಾಗೂ ಸಂಸ್ಥೆಗಳು ಒಪ್ಪಿದಲ್ಲಿ, ಸರ್ಕಾರಿ ನೌಕರನು/ನೌಕರರು ಅವರಿಗೆ ಸಂಬಂಧಿಸಿದ ಸೇವಾ ಸಂಸ್ಥೆಗಳ ಪರವಾಗಿ ಆಯೋಗದ ಮುಂದೆ ಹಾಜರಾಗಬಹುದು.

(ಊ) ಸರ್ಕಾರದ ವಿವಿಧ ಇಲಾಖೆಗಳು/ಸಂಸ್ಥೆಗಳು/ಮಂಡಳಿಗಳು ಆಯೋಗಕ್ಕೆ ಮಾಹಿತಿ/ದಾಖಲೆಗಳನ್ನು ಒದಗಿಸಲು ಹಾಗೂ ಪ್ರಸ್ತಾವನೆ ಸಲ್ಲಿಸಲು ಮೊದಲಿಗೆ ನೋಡಲ್ ಅಧಿಕಾರಿಯನ್ನು ಸಂಪರ್ಕಾಧಿಕಾರಿಯನ್ನಾಗಿ (Nodal Officer) ಅಧಿಸೂಚಿಸತಕ್ಕದ್ದು.

5. 7ನೇ ರಾಜ್ಯ ವೇತನ ಆಯೋಗವು ಬಿಡುಗಡೆ ಮಾಡಿರುವ ಪ್ರಶ್ನಾವಳಿ ಮತ್ತು ಇತರೆ ಮಾಹಿತಿಗಳು ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ರಲ್ಲಿ ಲಭ್ಯವಿದ್ದು, ಅಲ್ಲಿಂದ ಅವುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಸದರಿ ಪ್ರಶ್ನಾವಳಿಗಳಿಗೆ ಉತ್ತರಗಳನ್ನು ಒದಗಿಸಲು ಅನುಸರಿಸಬೇಕಾದ ಕಾರ್ಯವಿಧಾನವು ಈ ಮುಂದಿನಂತಿದೆ:-

(1) ಇಲಾಖಾ ಮುಖ್ಯಸ್ಥರು ತಮ್ಮ ಅಧಿಕಾರ ಸ್ಥಾನದಿಂದ ಪ್ರಶ್ನಾವಳಿಗಳಿಗೆ ಉತ್ತರಗಳು/ ವಿವರಣೆ/ದಾಖಲೆಗಳನ್ನು ತಮಗೆ ಸಂಬಂಧಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳಿಗೆ ಕಳುಹಿಸಬಹುದು. ಕಾರ್ಯದರ್ಶಿಗಳು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಿ, ವೇತನ ಆಯೋಗದ ಕಾರ್ಯದರ್ಶಿಗಳಿಗೆ ನೇರವಾಗಿ ಕಳುಹಿಸುವುದು.

(2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರು ಪ್ರಶ್ನಾವಳಿಗಳಿಗೆ ಅವರ ವೈಯಕ್ತಿಕ ಅನಿಸಿಕೆಗಳನ್ನು/ ಉತ್ತರಗಳನ್ನು ವೇತನ ಆಯೋಗದ ಕಾರ್ಯದರ್ಶಿಗಳಿಗೆ ನೇರವಾಗಿ ಕಳುಹಿಸುವುದು.

(3) ಸರ್ಕಾರದ ವಿವಿಧ ಇಲಾಖೆಗಳ/ಸಂಸ್ಥೆಗಳ/ಮಂಡಳಿಗಳ ಅಧೀನ ಅಧಿಕಾರಿಗಳು ಅವರ ನಿವೇದನೆಗಳನ್ನು/ಮನವಿಗಳನ್ನು ಸಂಬಂಧಿಸಿದ ಇಲಾಖೆಯ ಮುಖಾಂತರ ಸಲ್ಲಿಸಬಹುದು. ಒಂದೊಮ್ಮೆ ಆಯೋಗಕ್ಕೆ ನೇರವಾಗಿ ಮಾಹಿತಿಯನ್ನು/ ನಿವೇದನೆಗಳನ್ನು ಕಳುಹಿಸಲು ಬಯಸಿದಲ್ಲಿ ಅದನ್ನು ವೇತನ ಆಯೋಗದ ಕಾರ್ಯದರ್ಶಿಯವರಿಗೆ ನೇರವಾಗಿ ಕಳುಹಿಸುವುದು.

6. ಈ ಮೇಲೆ ಪ್ರಸ್ತಾಪಿಸಲಾಗಿರುವ ಅಂಶಗಳ ಜೊತೆಗೆ ಪ್ರತಿಯೊಂದು ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು/ಇಲಾಖಾ ಮುಖ್ಯಸ್ಥರು ಆಯಾ ಇಲಾಖೆಯಲ್ಲಿ ದಿನಾಂಕ:31-01-2023 ರಲ್ಲಿದ್ದಂತೆ, ಈ ಕೆಳಕಂಡ ಮಾಹಿತಿಗಳನ್ನು ವೇತನ ಆಯೋಗಕ್ಕೆ ದಿನಾಂಕ: 10-02-2023ರ ಒಳಗೆ ಕಳುಹಿಸತಕ್ಕದ್ದು ಅಥವಾ ಆಯೋಗವು ವಿಸ್ತರಿಸಿ ನಿಗದಿಪಡಿಸಬಹುದಾದ ದಿನಾಂಕದೊಳಗೆ ಕಳುಹಿಸತಕ್ಕದ್ದು.

(ಅ) ಇಲಾಖೆಯ ಪ್ರತಿಯೊಂದು ಸೇವೆಯ ವಿವರಗಳು. ಅವುಗಳ ಕಾರ್ಯ ವ್ಯಾಪ್ತಿ ಮತ್ತು ಅವಶ್ಯಕತೆ.

(ಆ) ಪ್ರತಿಯೊಂದು ಸೇವೆಯ ವೃಂದಗಳ ಸಂಖ್ಯೆಯನ್ನು ಈ ಕೆಳಕಂಡ ನಮೂನೆಯಲ್ಲಿ ನಮೂದಿಸತಕ್ಕದ್ದು.

| ವೃಂದಗಳು | ವೇತನ ಶ್ರೇಣಿ | ವಿಶೇಷ ಭತ್ಯೆ ಯಾವುದಾದರೂ (ಇದ್ದರೆ) | ಪ್ರತಿಯೊಂದು ವೃಂದದಲ್ಲೂ ಮಂಜೂರು ಮಾಡಲಾದ ಹುದ್ದೆಗಳ ಸಂಖ್ಯೆ | | | ಖಾಲಿ ಹುದ್ದೆಗಳು |
|---|---|---|---|---|---|---|
| | | | ಖಾಯಂ | ತಾತ್ಕಾಲಿಕ | ಒಟ್ಟು | |
| 1 | 2 | 3 | 4 | 5 | 6 | 7 |
| ಗುಂಪು ಎ<br>ಗುಂಪು ಬಿ<br>ಗುಂಪು ಸಿ<br>ಗುಂಪು ಡಿ | | | | | | |

| ಇತ್ತೀಚಿನ ಸರ್ಕಾರದ ನೀತಿಯ ಪ್ರಕಾರ ವಿಭಾಗೀಯ / ಇತರ ಮಟ್ಟದಲ್ಲಿ ರದ್ದುಪಡಿಸಲಾಗಿರುವ ಅಥವಾ ರದ್ದುಪಡಿಸಲು ಉದ್ದೇಶಿಸಲಾಗಿರುವ ಹುದ್ದೆಗಳ ವಿವರ | ಆಯ್ಕೆ ವೇತನ ಶ್ರೇಣಿ (10 ವರ್ಷದ ನಂತರ) ಯಾವುದಾದರೂ ಮಂಜೂರು ಮಾಡಿದ್ದಲ್ಲಿ ಪ್ರತಿಯೊಂದು ವೃಂದದಲ್ಲಿರುವ ಸಂಖ್ಯೆ (ಶ್ರೇಣಿವಾರು) | ಹಿರಿಯ ವೇತನ ಶ್ರೇಣಿ/ ಆಯ್ಕೆ ದರ್ಜೆ ವೇತನ ಶ್ರೇಣಿ ಯಾವುದಾದರೂ ಮಂಜೂರು ಮಾಡಿದ್ದಲ್ಲಿ ಪ್ರತಿಯೊಂದು ವೃಂದದಲ್ಲಿರುವ ಸಂಖ್ಯೆ (ಶ್ರೇಣಿವಾರು) | ಪ್ರತಿಯೊಂದು ವೃಂದದಲ್ಲಿನ ಯಾವುದಾದರೂ ಶ್ರೇಣಿವಾರಿನಲ್ಲಿ ಸ್ಥಗಿತ ವೇತನವಿದ್ದರೆ ಶ್ರೇಣಿವಾರು ಅವಲಂಬಿತರ ಸಂಖ್ಯೆ | ಪ್ರಸ್ತುತ ಮುಂಬಡ್ತಿಯ ಅವಕಾಶಗಳು | ಷರಾ |
|---|---|---|---|---|---|
| 8 | 9 | 10 | 11 | 12 | 13 |

(1) ಭಾರತದ ಮಾನ್ಯ ಸರ್ವೋಚ್ಛ ನ್ಯಾಯಾಲಯ, ಉಚ್ಛ ನ್ಯಾಯಾಲಯ ಅಥವಾ ಆಡಳಿತ ನ್ಯಾಯ ಮಂಡಳಿಗಳ ತೀರ್ಪು/ನಿರ್ದೇಶನಗಳ ಅನ್ವಯ -

(ಅ) ಯಾವುದಾದರೂ ವೃಂದದ, ಕೆಲವು ವರ್ಗಗಳ ಹುದ್ದೆಯ ವೇತನ ಶ್ರೇಣಿಯನ್ನು ಪರಿಷ್ಕರಿಸುವ ಬಗ್ಗೆ;

(ಆ) ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಿ ಅವುಗಳಿಗೆ ವೇತನ ಶ್ರೇಣಿಯನ್ನು ಮಂಜೂರು ಮಾಡುವ ಬಗ್ಗೆ;

(ಇ) ಇತರೆ ವೃಂದಗಳೊಂದಿಗೆ ವೇತನ ಶ್ರೇಣಿಯನ್ನು ಸಮಾನಾಂತರಗೊಳಿಸುವ ಬಗ್ಗೆ.

(2) ವೃಂದ ಪುನರಾವಲೋಕನಾ ಸಮಿತಿಯ ತೀರ್ಮಾನಗಳ ಪ್ರಕಾರ ಸೇವೆಯಲ್ಲಿ ಹೊಸ ವೃಂದಗಳನ್ನು ಸೃಷ್ಟಿಸಿ/ಪ್ರಾರಂಭಿಸಿ, ಅವುಗಳಿಗೆ ಹೊಸ ವೇತನ ಶ್ರೇಣಿಗಳನ್ನು ಮಂಜೂರು ಮಾಡುವ ಬಗ್ಗೆ.

(3) ಸರ್ಕಾರಿ ನೌಕರರಿಗೆ ಪದೋನ್ನತಿ ಕುರಿತಂತೆ ಅನುಸರಿಸಬೇಕಾದ ಕಾಲಮಿತಿಯ ಅನುಷ್ಠಾನದ ಬಗ್ಗೆ.

7. ವೇತನ ಆಯೋಗವು ಬಯಸುವ ಅಗತ್ಯ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಸಂಗ್ರಹಿಸಿ ಆಯೋಗಕ್ಕೆ ಸಲ್ಲಿಸುವ ಜವಾಬ್ದಾರಿಯು ಇಲಾಖೆ/ಸಂಸ್ಥೆಗಳ ಸಂಪರ್ಕಾಧಿಕಾರಿಯದ್ದಾಗಿರುತ್ತದೆ. ಆದುದರಿಂದ, ಸರ್ಕಾರದ ವಿವಿಧ ಇಲಾಖೆಗಳ/ಸಂಸ್ಥೆಗಳ ಮುಖ್ಯಸ್ಥರುಗಳು ವೇತನ ಆಯೋಗದೊಂದಿಗೆ ಸುಗಮವಾಗಿ ವ್ಯವಹರಿಸಲು ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ಕೂಡಲೇ ಅಧಿಸೂಚಿಸತಕ್ಕದ್ದು. ಹೀಗೆ ನೇಮಿಸಲಾದ ನೋಡಲ್ ಅಧಿಕಾರಿಯ ಹೆಸರು, ಪದನಾಮ, ಇಲಾಖೆ/ಸಂಸ್ಥೆ, ಕಛೇರಿ ವಿಳಾಸ ಮತ್ತು ಸಂವಹನಕ್ಕಾಗಿ ದೂರವಾಣಿ/ಮೊಬೈಲ್/ಇ-ಮೇಲ್ ವಿವರಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಇಲಾಖೆಯು ನೀಡಬಯಸುವ ಮಾಹಿತಿಗಳನ್ನು ಭೌತಿಕ ಪ್ರತಿಯ ಮೂಲಕ ಮತ್ತು ಆಯೋಗದ ಇ-ಮೇಲ್ ವಿಳಾಸ spcgok@gmail.com ಕ್ಕೆ ಕಳುಹಿಸತಕ್ಕದ್ದು.

8.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮತ್ತು ಇಲಾಖೆಗಳ ಮುಖ್ಯಸ್ಥರು ವೇತನ ಆಯೋಗದ ಪ್ರಶ್ನಾವಳಿಗಳಿಗೆ ಮಾಹಿತಿ ಒದಗಿಸುವಲ್ಲಿ ಈ ಮೇಲಿನ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಹಾಗೂ ಆಯೋಗವು ಬಯಸುವ ವಿಷಯಗಳಿಗೆ

ತಮ್ಮ ಸಹಕಾರವನ್ನು ನೀಡಿ ಆಯೋಗದ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲು ಸಹಕಾರ ನೀಡುವಂತೆ ಕೋರಿದೆ.

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ.
6/2

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ / ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು
3. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
5. ಪ್ರಧಾನಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
6. ಗೌರವಾನ್ವಿತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ, ರಾಜಭವನ, ಬೆಂಗಳೂರು
7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
9. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು
11. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗಾ
12. ಕಾರ್ಯದರ್ಶಿ, ವಿಧಾನ ಸಭೆ / ವಿಧಾನ ಪರಿಷತ್ತು, ವಿಧಾನ ಸೌಧ ಬೆಂಗಳೂರು
13. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು
14. ಅಧ್ಯಕ್ಷರು / ಸದಸ್ಯರು, 7ನೇ ರಾಜ್ಯ ವೇತನ ಆಯೋಗ, ಔಷಧ ನಿಯಂತ್ರಣ ಇಲಾಖೆಯ ಕಟ್ಟಡ, 3ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001
15. ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ಮುಖ್ಯಸ್ಥರು
16. ಎಲ್ಲಾ ಜಿಲ್ಲೆಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
17. ಎಲ್ಲಾ ಇಲಾಖಾ ಮುಖ್ಯಸ್ಥರು/ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
18. ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು

19. ಕರ್ನಾಟಕರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರು (ಆಡಳಿತ)

20. ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು / ರಿಜಿಸ್ಟ್ರಾರ್‌ಗಳು

21. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

22. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ

23. ನಿರ್ದೇಶಕರು, ಕರ್ನಾಟಕರಾಜ್ಯಪತ್ರಾಗಾರಇಲಾಖೆ, ವಿಕಾಸಸೌಧ, ಬೆಂಗಳೂರು.

24. ಯೋಜನಾ ನಿರ್ದೇಶಕರು, ಹೆಚ್‌ಆರ್‌ಎಂಎಸ್ 2.0, ಆರ್ಥಿಕಇಲಾಖೆ, 5ನೇಮಹಡಿ, ನ್ಯೂ ಕೆ.ಪಿ.ಸಿ.ಎಲ್. ಗ್ರೀನ್ಬಿಲ್ಡಿಂಗ್ (ಸಿ.ಐ.ಡಿ. ಕಛೇರಿಹತ್ತಿರ), ಅರಮನೆರಸ್ತೆ, ಬೆಂಗಳೂರು-560001.

25. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು

26. ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ(ರಿ), ಕಬ್ಬನ್ ಉದ್ಯಾನವನ, ಬೆಂಗಳೂರು

27. ಕರ್ನಾಟಕ ಸರ್ಕಾರ ಸಚಿವಾಲಯ ಗ್ರಂಥಾಲಯ / ವಿಧಾನ ಮಂಡಲದ ಗ್ರಂಥಾಲಯ

28. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ

29. ಎಲ್ಲಾ ನೋಂದಾಯಿತ ನೌಕರರ ಸಂಘಗಳು

30. ವಾರಪತ್ರ / ಶಾಖಾರಕ್ಷಕಕಡತ

**ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ**

www.finance.karnataka.gov.in**ವೀಕ್ಷಿಸಿ.**

ಕರ್ನಾಟಕ ರಾಜ್ಯ 7ನೇ ವೇತನ ಆಯೋಗ

# ಅಧಿಕೃತ ಜ್ಞಾಪನ

ಸಂಖ್ಯೆ: ರಾವೇಆ/1/2023, ಬೆಂಗಳೂರು ದಿನಾಂಕ: 17-01-2023

ಕರ್ನಾಟಕ ಸರ್ಕಾರವು ಸರ್ಕಾರಿ ನೌಕರರು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು, ಸ್ಥಳೀಯ ಸಂಸ್ಥೆಗಳ ನೌಕರರು ಹಾಗೂ ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳ ವೇತನ, ತುಟ್ಟಿಭತ್ಯೆ ಹಾಗೂ ಇತರ ಸೌಲಭ್ಯಗಳ ಬಗ್ಗೆ ಪರಿಶೀಲಿಸಿ, ಪರಿಷ್ಕರಿಸಿ ಸರ್ಕಾರಕ್ಕೆ ವರದಿ ನೀಡಲು ಸರ್ಕಾರಿ ಆದೇಶ ಸಂಖ್ಯೆ: ಆಇ 45 ಎಸ್ಆರ್‌ಪಿ 2022 ದಿನಾಂಕ: 19.11.2022 ರಲ್ಲಿ ರಾಜ್ಯ 7ನೇ ರಾಜ್ಯ ವೇತನ ಆಯೋಗವನ್ನು ಶ್ರೀ ಸುಧಾಕರ್ ರಾವ್, ಭಾ.ಆ.ಸೇ (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ರಚಿಸಿದೆ.

ಆಯೋಗಕ್ಕೆ ವಹಿಸಲಾಗಿರುವ ಪರಿಶೀಲನಾಂಶಗಳ ಕುರಿತಂತೆ ಸಾರ್ವಜನಿಕರು, ಸೇವಾ ಸಂಘಗಳು ಹಾಗೂ ಸರ್ಕಾರಿ ನೌಕರರು ಅಲ್ಲದೇ, ಇಲಾಖೆಗಳಿಂದ, ಸಂಸ್ಥೆಗಳಿಂದ ಮಾಹಿತಿ ಹಾಗೂ ಮುಕ್ತ ಸಲಹೆಗಳನ್ನು ಪಡೆಯುವ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಆಯೋಗವು ಕೆಳಕಂಡ ಪ್ರಶ್ನಾವಳಿಗಳನ್ನು (ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ) ತಯಾರಿಸಿದ್ದು, **ಅನುಬಂಧ**ದಲ್ಲಿ ಲಗತ್ತಿಸಿದೆ.

1. ಪ್ರಶ್ನಾವಳಿ-ಎ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ
2. ಪ್ರಶ್ನಾವಳಿ-ಬಿ ಸರ್ಕಾರದ ಅಮುಕಾ/ಪ್ರಕಾ/ಕಾರ್ಯದರ್ಶಿಗಳಿಗೆ
3. ಪ್ರಶ್ನಾವಳಿ-ಸಿ ಇಲಾಖಾ ಮುಖ್ಯಸ್ಥರಿಗೆ
4. ಪ್ರಶ್ನಾವಳಿ-ಡಿ ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿ ವರ್ಗದವರಿಗೆ
5. ಪ್ರಶ್ನಾವಳಿ-ಇ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ
6. ಪ್ರಶ್ನಾವಳಿ-ಎಫ್ ಸ್ಥಳೀಯ ಸಂಸ್ಥೆಗಳಿಗೆ
7. ಪ್ರಶ್ನಾವಳಿ-ಜಿ ಸಾರ್ವಜನಿಕರಿಗೆ

ಸಂಬಂಧಪಟ್ಟ ಪ್ರಶ್ನಾವಳಿಗಳಿಗೆ ಸರ್ಕಾರದ ಅಮುಕಾ/ಪ್ರಕಾ/ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು, ವಿಶ್ವವಿದ್ಯಾನಿಲಯಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ಸರ್ಕಾರಿ ನೌಕರರು, ನಿವೃತ್ತ ವೇತನದಾರರು ಹಾಗೂ ಆಸಕ್ತ ಸಾರ್ವಜನಿಕರು, ಪ್ರಶ್ನಾವಳಿಯಲ್ಲಿನ ಅಂಶಗಳಿಗೆ ಉತ್ತರಗಳನ್ನು ತಮ್ಮ ಅನಿಸಿಕೆ ಹಾಗೂ ಮುಕ್ತ ಸಲಹೆಗಳೊಂದಿಗೆ ಕಾರ್ಯದರ್ಶಿ, 7ನೇ ರಾಜ್ಯ ವೇತನ ಆಯೋಗ, 3ನೇ ಮಹಡಿ, ಔಷಧ ನಿಯಂತ್ರಣ ಇಲಾಖೆಯ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು - 560001 ಇವರಿಗೆ ದಿನಾಂಕ: 10-02-2023 ರೊಳಗೆ ಸಲ್ಲಿಸುವಂತೆ ಕೋರಿದೆ.

**(ಜಿ.ಬಿ.ಹೇಮಣ್ಣ)**
ಜಂಟಿ ಕಾರ್ಯದರ್ಶಿ
7ನೇ ರಾಜ್ಯ ವೇತನ ಆಯೋಗ(ಪ್ರ)

# ಅನುಬಂಧ

## 7ನೇ ಕರ್ನಾಟಕ ರಾಜ್ಯ ವೇತನ ಆಯೋಗ

1. ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರಿ ನೌಕರರು, ಅನುದಾನಿತ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ನೌಕರರು ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳ ವೇತನ ಶ್ರೇಣಿಗಳನ್ನು ಪರಿಷ್ಕರಿಸಲು ಮತ್ತು ಅವರಿಗೆ ಹೊಸ ವೇತನ ರಚನೆಯನ್ನು ಶಿಫಾರಸ್ಸು ಮಾಡಲು 7ನೇ ರಾಜ್ಯ ವೇತನ ಆಯೋಗವನ್ನು ರಚಿಸಿದೆ. ಆಯೋಗವನ್ನು ನಿರ್ದಿಷ್ಟವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿನ ಸಿಬ್ಬಂದಿಗಳ ನಡುವಿನ ಹುದ್ದೆಗಳ ಸಮಾನತೆಯನ್ನು ನಿರ್ಧರಿಸುವ ಮೂಲಕ ಕೇಂದ್ರೀಯ ವೇತನ ರಚನೆಯನ್ನು ಅಳವಡಿಸಿಕೊಳ್ಳುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸಲು ಕೋರಲಾಗಿದೆ.

2. ಆಯೋಗವು, ನಿವೃತ್ತಿ ವೇತನ, ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ವೈದ್ಯಕೀಯ ಸೌಲಭ್ಯ ಮತ್ತು ಇತರ ಸೌಲಭ್ಯಗಳಿಗೆ ಸಂಬಂಧಿಸಿದಂತೆಯೂ ಅವಶ್ಯವಿರುವ ಬದಲಾವಣೆಗಳ ಕುರಿತು ಸಹ ಶಿಫಾರಸ್ಸು ಮಾಡುವಂತೆ ಸೂಚಿಸಲಾಗಿದೆ. ಆಯೋಗವು ತನ್ನ ಶಿಫಾರಸ್ಸುಗಳನ್ನು ಮಾಡುವಲ್ಲಿ ರಾಜ್ಯದ ಸಂಪನ್ಮೂಲಗಳು, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಕುರಿತಾದ ರಾಜ್ಯ ಸರ್ಕಾರದ ಹೊಣೆಗಳು, ಶಾಸನಬದ್ಧ ಹಾಗೂ ನಿಯಂತ್ರಕ ಕಾರ್ಯಗಳು, ಋಣ ಸೇವಾ ನಿರ್ವಹಣೆಗಳು ಮತ್ತು ಇತರೇ ಅಭಿವೃದ್ಧಿಯೇತರ ಅಗತ್ಯಗಳನ್ನು ಮತ್ತು ರಾಜ್ಯ ವಿತ್ತೀಯ ಹೊಣೆಗಾರಿಕೆ ನಿರ್ವಹಣೆ ಅಧಿನಿಯಮ 2002ರ ಅವಕಾಶಗಳ ಪರಿಮಿತಿಯನ್ನು ಗಮನದಲ್ಲಿರಿಸಬೇಕಾಗಿದೆ.

3. ರಾಜ್ಯ ಸರ್ಕಾರಿ ನೌಕರರು ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು, ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳು ಹಾಗು ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಭತ್ಯೆಗಳ ಪರಿಷ್ಕರಣೆಯನ್ನು ಸಾಮಾನ್ಯವಾಗಿ 5 ವರ್ಷಗಳಿಗೊಮ್ಮೆ ವೇತನ ಆಯೋಗ ಅಥವಾ ವೇತನ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಪರಿಷ್ಕರಿಸಲಾಗುತ್ತದೆ. ಕಳೆದ ಬಾರಿ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ವೇತನ ಭತ್ಯೆಗಳನ್ನು, ದಿನಾಂಕ: 01-07-2017 ರಿಂದ ಜಾರಿಗೆ ಬರುವಂತೆ ಹಾಗೂ ಆರ್ಥಿಕ ಪ್ರಯೋಜನಗಳು ದಿನಾಂಕ: 01-04-2018 ರಿಂದ ಅನ್ವಯವಾಗುವಂತೆ 2018 ರಲ್ಲಿ ಪರಿಷ್ಕರಿಸಲಾಯಿತು.

4. ಸರ್ಕಾರಿ ನೌಕರರ ವೇತನ ಶ್ರೇಣಿ / ಹೊಸ ವೇತನ ರಚನೆ ಮಾಡುವಾಗ ಸಾಮಾನ್ಯವಾಗಿ ಅಳವಡಿಸಿಕೊಳ್ಳುವ ಮಾನದಂಡಗಳಲ್ಲಿ ವಿವಿಧ ಹುದ್ದೆಗಳ ವಿದ್ಯಾರ್ಹತೆ ಮತ್ತು ತರಬೇತಿ, ಜವಾಬ್ದಾರಿಯ ಪ್ರಮಾಣ, ಕಾರ್ಯಕ್ಷೇತ್ರದ ವ್ಯಾಪ್ತಿ, ವೃತ್ತಿ ಸಂಬಂಧಿತ ತೊಂದರೆಗಳು, ನಿರ್ಣಯ ತೆಗೆದುಕೊಳ್ಳಲು ಅಗತ್ಯವಿರುವ ಹಂತಗಳು, ಬಡ್ತಿ ಅವಕಾಶಗಳು, ಇತರೇ ಇಲಾಖೆಗಳಲ್ಲಿರುವ ಸಮಾನ ದರ್ಜೆಯ ಹುದ್ದೆಗಳ

ಸಮಾನಾಂತರ ಹಾಗೂ ನೇರ ಸಂಬಂಧದ ತುಲನಾತ್ಮಕ ಸ್ವರೂಪ ಮತ್ತು ಕಾಲಕಾಲಕ್ಕೆ ರಚನೆ ಆಗಿರುವ ವೇತನ ಶ್ರೇಣಿಗಳ ಕುರಿತ ಐತಿಹಾಸಿಕ ಸಂಬಂಧಗಳು ಮುಂತಾದವು ಒಳಗೊಂಡಿದೆ.

5. ಸರ್ಕಾರದ ಕಾರ್ಯಗಳ ಮೂಲ ಉದ್ದೇಶಗಳಲ್ಲಿ ಇತರ ಕರ್ತವ್ಯಗಳ ಜೊತೆ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ, ಸಾಮಾಜಿಕ ಸೇವೆಗಳು ಮತ್ತು ಮೂಲಸೌಕರ್ಯಗಳನ್ನು ಒದಗಿಸುವುದು, ಸಮಾಜದ ದುರ್ಬಲ ವರ್ಗಗಳ ಕಲ್ಯಾಣ, ಪರಿಸರ ಸಂರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಸಮಾನ ಅವಕಾಶಗಳಿಗೆ ಉತ್ತೇಜನ ನೀಡುವ ಕ್ರಮವು ಒಳಗೊಂಡಿರುತ್ತದೆ. ಈ ಉದ್ದೇಶಗಳನ್ನು ಸಾಧಿಸಲು, ರಾಜ್ಯ ಸರ್ಕಾರವು ರಾಜ್ಯಾದ್ಯಂತ ಸರ್ಕಾರಿ ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿ ಸುಮಾರು 5 ಲಕ್ಷ ಉದ್ಯೋಗಿಗಳನ್ನು ನೇಮಿಸಿಕೊಂಡಿದೆ. ಈ ಉದ್ಯೋಗಿಗಳಲ್ಲಿ, ಸುಮಾರು 80% ರಷ್ಟು ಸಿಬ್ಬಂದಿ ಪೊಲೀಸ್, ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ನೀರಾವರಿ, ಕೃಷಿ ಮತ್ತು ಸಮಾಜ ಕಲ್ಯಾಣ ಕ್ಷೇತ್ರಗಳಲ್ಲಿ ನೇಮಿಸಲಾಗಿದೆ.

6. ರಾಜ್ಯ ಸರ್ಕಾರದಿಂದ ಪಿಂಚಣಿ ಪಡೆಯುತ್ತಿರುವ ನಿವೃತ್ತ ನೌಕರರು / ನಿವೃತ್ತ ನೌಕರರ ಕುಟುಂಬಗಳ ಸಂಖ್ಯೆ ಸುಮಾರು 5.11 ಲಕ್ಷ. 2022-23 ರಲ್ಲಿ ವೇತನ ಮತ್ತು ಪಿಂಚಣಿಗಳ ವೆಚ್ಚವನ್ನು ಕ್ರಮವಾಗಿ ರೂ.41,288/- ಕೋಟಿಗಳು ಮತ್ತು ರೂ.24,016/- ಕೋಟಿಗಳೆಂದು ಅಂದಾಜಿಸಲಾಗಿದೆ. ರಾಜ್ಯದ ಒಟ್ಟು ಆದಾಯದಲ್ಲಿ (ತೆರಿಗೆ + ತೆರಿಗೆಯೇತರ + ಹಂಚಿಕೆ) ವೇತನದ ಮೇಲಿನ ವೆಚ್ಚವು 21.70% ರಷ್ಟು ಮತ್ತು ಪಿಂಚಣಿ ಮೇಲಿನ ವೆಚ್ಚವು 12% ರಷ್ಟಾಗಿದೆ. ಅಲ್ಲದೇ, ಅನುದಾನಿತ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಯ ವೇತನ ವೆಚ್ಚ ಮತ್ತು ಪಿಂಚಣಿ ಪಾವತಿಗಳನ್ನು ಪೂರೈಸಲು ರಾಜ್ಯ ಸರ್ಕಾರವು ಸಹಾಯಧನವನ್ನು ಒದಗಿಸುತ್ತದೆ.

7. ಪ್ರಸ್ತುತ ಜಾರಿಯಲ್ಲಿರುವ ವೇತನ ಶ್ರೇಣಿಗಳನ್ನು, 6ನೇ ವೇತನ ಆಯೋಗದ ಶಿಫಾರಸ್ಸಿನಂತೆ, ಅಖಿಲ ಭಾರತ ಗ್ರಾಹಕ ಬೆಲೆ ಸೂಚ್ಯಂಕದ ಹಂತ (AIACPI) (IW 2001 ಶ್ರೇಣಿ) 276.9 ಬಿಂದುವಿಗೆ ಅನುಗುಣವಾದ ಜೀವನ ನಿರ್ವಹಣ ವೆಚ್ಚವನ್ನು ಆಧರಿಸಿ ಹಾಗೂ ದಿನಾಂಕ: 01-07-2017 ರಂದು ಲಭ್ಯವಾಗುವ ತುಟ್ಟಿ ಭತ್ಯೆಯನ್ನು ವಿಲೀನಗೊಳಿಸಿ ರೂಪಿಸಲಾಗಿದೆ. ಈ ವೇತನ ಶ್ರೇಣಿಗಳು ದಿನಾಂಕ: 01-07-2017 ರಿಂದ ಜಾರಿಯಲ್ಲಿವೆ. 92 ಹಂತಗಳನ್ನು ಒಳಗೊಂಡ 25 ಪ್ರತ್ಯೇಕ ವೇತನ ಶ್ರೇಣಿಗಳುಳ್ಳ ಮುಖ್ಯ ವೇತನ ಶ್ರೇಣಿಯನ್ನು ರಾಜ್ಯ ಸರ್ಕಾರವು ಅಳವಡಿಸಿಕೊಂಡಿದೆ.

8. ಪ್ರಸ್ತುತ ನೌಕರರಿಗೆ ನೀಡುತ್ತಿರುವ ಒಟ್ಟು ಕನಿಷ್ಠ ಸಂಬಳವು ಬೆಂಗಳೂರಿನಲ್ಲಿ ಮಾಸಿಕ ರೂ.26,850/- ಮತ್ತು ಗ್ರಾಮೀಣ ಪ್ರದೇಶದಲ್ಲಿ ಮಾಸಿಕ ರೂ.23,630/- ಇದೆ. ಈ ಮೊತ್ತವು ಅವರಿಗೆ ಲಭ್ಯವಿರುವ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಒಳಗೊಂಡಿದೆ. ಅತ್ಯಂತ ಕೆಳಗಿನ ವೇತನ ಶ್ರೇಣಿಯ ಕನಿಷ್ಠ ವೇತನ ಮತ್ತು ಅತ್ಯಂತ ಮೇಲಿನ ವೇತನ ಶ್ರೇಣಿಯ ಕನಿಷ್ಠ ವೇತನಗಳ ಅನುಪಾತವು 1:8.86 ಇರುತ್ತದೆ. ಅತ್ಯಂತ ಕೆಳಗಿನ ವೇತನ ಶ್ರೇಣಿಯ ಗರಿಷ್ಠ ವೇತನ ಮತ್ತು ಅತ್ಯಂತ ಮೇಲಿನ ವೇತನ ಶ್ರೇಣಿಯ ಗರಿಷ್ಠ ವೇತನಗಳ ಅನುಪಾತವು 1:5.20 ಇರುತ್ತದೆ.

9. ವಾರ್ಷಿಕ ವೇತನ ಬಡ್ತಿಯ ದರಗಳು ವಿವಿಧ ವೇತನ ಶ್ರೇಣಿಗಳಿಗೆ ಅನುಗುಣವಾಗಿ ರೂ.400/- ರಿಂದ ರೂ.3,100/- ರವರೆಗೆ ಇರುತ್ತವೆ. ಸರ್ಕಾರಿ ನೌಕರನು ಯಾವುದೇ ಮುಂಬಡ್ತಿ ಇಲ್ಲದೇ 20, 25 ಅಥವಾ 30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಸಂದರ್ಭಗಳಲ್ಲಿ ಹೆಚ್ಚುವರಿ ವೇತನ ಭತ್ಯೆಗಳನ್ನು ನೀಡಲಾಗುತ್ತದೆ. ಯಾವುದೇ ವೇತನ ಶ್ರೇಣಿಯ ಗರಿಷ್ಠ ಹಂತವನ್ನು ತಲುಪಿದ ಸರ್ಕಾರಿ ನೌಕರರಿಗೆ ಗರಿಷ್ಠ 8 ವಾರ್ಷಿಕ ಸ್ಥಗಿತ ವೇತನ ಬಡ್ತಿ ನೀಡಲಾಗುತ್ತದೆ.

10. ಜೀವನ ನಿರ್ವಹಣಾ ವೆಚ್ಚದ ಏರಿಕೆಯಿಂದ ಉಂಟಾಗುವ ಪರಿಣಾಮದಿಂದ ನೌಕರರಿಗೆ ಆಗುವ ತೊಂದರೆಗೆ ಪರಿಹಾರ ನೀಡಲು, 12 ತಿಂಗಳ ಅಖಿಲ ಭಾರತ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕವನ್ನು (AIACPI) ಆಧರಿಸಿ ತುಟ್ಟಿ ಭತ್ಯೆಯನ್ನು ವರ್ಷದಲ್ಲಿ 2 ಬಾರಿ ಪರಿಷ್ಕರಿಸಿ, ಮಂಜೂರು ಮಾಡಲಾಗುತ್ತಿದೆ. ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಗಳ ನೀಡಿಕೆಯು ನೌಕರರ ಮೂಲ ವೇತನ ಮತ್ತು ಜನ ಸಂಖ್ಯೆಯ ಆಧಾರದ ಮೇಲೆ ನಗರಗಳ / ಇತರ ಸ್ಥಳಗಳ ವರ್ಗೀಕರಣಕ್ಕೆ ಅನುಸಾರವಾಗಿ ಅವರು ಕೆಲಸ ಮಾಡುವ ಸ್ಥಳದ ಮೇಲೆ ಬದಲಾಗುತ್ತದೆ. ಪ್ರಸ್ತುತ ದರದಂತೆ ಎ, ಬಿ ಮತ್ತು ಸಿ ಎಂದು ವರ್ಗೀಕರಿಸಲಾದ ಸ್ಥಳಗಳಲ್ಲಿ ಅನುಕ್ರಮವಾಗಿ 24%, 16% ಮತ್ತು 8% ಮನೆ ಬಾಡಿಗೆ ಭತ್ಯೆಯು ದೊರೆಯುತ್ತದೆ. ಬೆಂಗಳೂರಿನಲ್ಲಿ (ಬಿ.ಬಿ.ಎಂ.ಪಿ. ಪ್ರದೇಶ) ಕರ್ತವ್ಯ ನಿರ್ವಹಿಸುವ ಗ್ರೂಪ್ - ಸಿ ಮತ್ತು ಡಿ ನೌಕರರು ರೂ.500/- ಮತ್ತು ಗ್ರೂಪ್-ಬಿ ಮತ್ತು ಎ ಅಧಿಕಾರಿಗಳು ರೂ.600/- ನಗರ ಪರಿಹಾರ ಭತ್ಯೆಗೆ ಅರ್ಹರು. ಬೆಳಗಾವಿ, ಮಂಗಳೂರು, ಮೈಸೂರು ಮತ್ತು ಕಲಬುರ್ಗಿ ನಗರಗಳ ನಗರ ಸಮುಚ್ಚಯದಲ್ಲಿ ಮತ್ತು ಹುಬ್ಬಳ್ಳಿ ಧಾರವಾಡದಲ್ಲಿ ಲಭ್ಯವಾಗುವ ನಗರ ಪರಿಹಾರ ಭತ್ಯೆ ದರವು ರೂ.400/- ರಿಂದ ರೂ.450/- ರವರೆಗೆ ಇರುತ್ತದೆ.

11. ನಿರ್ದಿಷ್ಟಪಡಿಸಲಾದ ಖಾಸಗಿ ವೈದ್ಯಕೀಯ ಸಂಸ್ಥೆಗಳ / ಆಸ್ಪತ್ರೆಗಳಲ್ಲಿ ಪಡೆಯಲಾದ ಚಿಕಿತ್ಸೆಯ ವೆಚ್ಚವು ಸೇರಿದಂತೆ ವಿವಿಧ ತರಹದ ಖಾಯಿಲೆಗಳಿಗೆ ತಗಲುವ ವೈದ್ಯಕೀಯ ವೆಚ್ಚದ ಮರುಪಾವತಿಯ ದರವನ್ನು ಕ್ರಮಬದ್ಧಗೊಳಿಸಿ, ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ಸರ್ಕಾರವು ಸರಳೀಕರಿಸಿದೆ. ಇದರ ಜೊತೆಗೆ ಗ್ರೂಪ್ - ಸಿ ಮತ್ತು ಡಿ ನೌಕರರು ಮಾಸಿಕ ರೂ.200/- ವೈದ್ಯಕೀಯ ಭತ್ಯೆಗೆ ಅರ್ಹರು. ಸರ್ಕಾರವು ದಿನಾಂಕ: 05-09-2022 ರ ಆದೇಶದಲ್ಲಿ 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ - ಕೆಎಎಸ್‌ಎಸ್' ಎಂಬ ನಗದು ರಹಿತ ಯೋಜನೆಯನ್ನು ಜಾರಿಗೊಳಿಸಿದೆ. ಇದು ನೌಕರರು ಮತ್ತು ಅವರ ಕುಟುಂಬದ ಅನುಕೂಲಕ್ಕಾಗಿ ಅನೇಕ ಚಿಕಿತ್ಸಾ ವಿಧಾನಗಳು ಮತ್ತು ಶಸ್ತ್ರಚಿಕಿತ್ಸೆಗಳನ್ನು ಒಳಗೊಂಡಿದೆ.

12. ವಿಕಲಚೇತನ ಸರ್ಕಾರಿ ನೌಕರರು ಹಾಗೂ ವಿಕಲಚೇತನ ಮಕ್ಕಳನ್ನು ಹೊಂದಿರುವ ಸರ್ಕಾರಿ ನೌಕರರು ಕೆಲವು ವಿಶೇಷ ಭತ್ಯೆಗಳಿಗೆ ಅರ್ಹರಿದ್ದಾರೆ. ಇದರಲ್ಲಿ ವಿಕಲಚೇತನ ಸರ್ಕಾರಿ ನೌಕರರಿಗೆ ದೊರೆಯುವ ಮೂಲ ವೇತನದ ಶೇ.6 ರಷ್ಟು ವಾಹನ ಭತ್ಯೆ ಮತ್ತು ಯಾಂತ್ರಿಕ / ಮೋಟಾರ್ ಚಾಲಿತ ವಾಹನಗಳನ್ನು ನೌಕರರು ಖರೀದಿಸಲು ವಾಹನದ ಬೆಲೆಯ ಶೇ.30 ರಷ್ಟು ಸಹಾಯಧನ, ಗರಿಷ್ಠ ರೂ.40,000/- ಮಿತಿಗೆ ಒಳಪಟ್ಟು

ಮೊತ್ತವು ಸೇರಿದೆ. ಸರ್ಕಾರಿ ನೌಕರರು ಹೊಂದಿರುವ ವಿಕಲಚೇತನ ಮಕ್ಕಳಿಗೆ ಇಬ್ಬರು ವಿಕಲಚೇತನ ಮಕ್ಕಳ ಮಿತಿಗೆ ಒಳಪಟ್ಟು ಮಾಸಿಕ ಒಬ್ಬರಿಗೆ ರೂ.1000/- ರಂತೆ ಶಿಕ್ಷಣ ಭತ್ಯೆ ಮತ್ತು ನಿರ್ವಹಣಾ ಭತ್ಯೆಯನ್ನು ನೀಡಲಾಗುತ್ತಿದೆ.

13. ಕೆಲವು ನಿಗದಿತ ಪ್ರವರ್ಗದ ಹುದ್ದೆಗಳಿಗೆ ನೀಡುತ್ತಿರುವ ವಾಹನ ಭತ್ಯೆ, ಸಮವಸ್ತ್ರ ಭತ್ಯೆ, ಅಪಾಯ ಭತ್ಯೆ, ನಿಗಧಿತ ಪ್ರಯಾಣ ಭತ್ಯೆ ಮತ್ತು ವಿಶೇಷ ಭತ್ಯೆಯು ಮಾಸಿಕ ದರವು ರೂ.100/- ರಿಂದ ರೂ.8500/- ರ ಪ್ರಮಾಣದಲ್ಲಿರುತ್ತದೆ. ಸರ್ಕಾರಿ ನೌಕರರಿಗೆ ಪ್ರತಿ ವರ್ಷ 15 ದಿನಗಳ ಮತ್ತು ನಿವೃತ್ತಿ ಸಮಯದಲ್ಲಿ ಗರಿಷ್ಠ 300 ದಿನಗಳವರೆಗೆ ಗಳಿಕೆ ರಜೆಯನ್ನು ನಗದೀಕರಿಸಲು ಅವಕಾಶವಿದೆ. ಮಹಿಳಾ ಉದ್ಯೋಗಿಗಳು 180 ದಿನಗಳ ಹೆರಿಗೆ ರಜೆಗೆ ಅರ್ಹರಿರುವರು. ಸರ್ಕಾರಿ ನೌಕರರ ಸೇವಾ ಅವಧಿಯಲ್ಲಿ ಭಾರತದ ಯಾವುದೇ ಸ್ಥಳಕ್ಕೆ 2 ಬಾರಿ ಹೋಗಿ ಬರಲು ರಜಾ ಪ್ರಯಾಣ ಭತ್ಯೆಯ ಸೌಲಭ್ಯವನ್ನು ವಿಸ್ತರಿಸಲಾಗಿದೆ.

14. ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 60 ವರ್ಷಗಳಾಗಿದ್ದು, ಇದು ಕೇಂದ್ರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸಿಗೆ ಸಮನಾಗಿದೆ. 30 ವರ್ಷಗಳ ಅರ್ಹತಾ ಸೇವೆಯನ್ನು ಪೂರ್ಣಗೊಳಿಸಿದ ನಿವೃತ್ತ ನೌಕರರು ಅವರ ಅಂತಿಮ ಮೂಲ ವೇತನದ ಶೇಕಡ 50 ರಷ್ಟು ಪೂರ್ಣ ಪ್ರಮಾಣದ ಪಿಂಚಣಿಗೆ ಮತ್ತು 30 ವರ್ಷಗಳಿಗಿಂತ ಕಡಿಮೆ ಅರ್ಹತಾ ಸೇವೆಯನ್ನು ಸಲ್ಲಿಸಿದ ಪ್ರಕರಣಗಳಲ್ಲಿ ಅರ್ಹತಾ ಸೇವೆಯ ಪ್ರಮಾಣಾನುಸಾರ ಪಿಂಚಣಿಗೆ ಅರ್ಹರು. ಪ್ರಸ್ತುತ ಜಾರಿಯಲ್ಲಿರುವ ನಿಯಮಾನುಸಾರ 15 ವರ್ಷಗಳ ಅರ್ಹತಾ ಸೇವೆಯನ್ನು ಅಥವಾ 50 ವರ್ಷಗಳ ವಯೋಮಿತಿಯನ್ನು ಪೂರ್ಣಗೊಳಿಸಿದ ಸರ್ಕಾರಿ ನೌಕರರು ಸ್ವ- ಇಚ್ಛಾ ನಿವೃತ್ತಿಯನ್ನು ಕೋರಬಹುದು. ನಿವೃತ್ತಿಯ ನಂತರ ನೌಕರರು ಗರಿಷ್ಠ 20 ಲಕ್ಷ ರೂ. ಗಳು ಅಥವಾ ಮೂಲವೇತನದ 16.5 ರಷ್ಟು ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ಮರಣ ಹಾಗೂ ನಿವೃತ್ತಿ ಉಪದಾನವನ್ನು ಪಡೆಯುವರು.

15. ಸರ್ಕಾರಿ ನೌಕರನ / ಪಿಂಚಣಿದಾರನ ಮರಣದ ನಂತರ ದೊರೆಯುವ ಕುಟುಂಬ ವೇತನವು ಕನಿಷ್ಠ ಮಾಸಿಕ ರೂ.8,500/- ಮತ್ತು ಗರಿಷ್ಠ ಮಾಸಿಕ ರೂ.45,180/- ರ ಮಿತಿಗೆ ಒಳಪಟ್ಟು ಆತನ ನಿವೃತ್ತಿ / ಮರಣದ ಸಮಯದಲ್ಲಿ ಪಡೆದ ಮೂಲವೇತನದ ಶೇಕಡ 30 ರಷ್ಟು ಇದೆ. ನಿವೃತ್ತಿ ಸರ್ಕಾರಿ ನೌಕರರು 1/3 ರಷ್ಟು ಪ್ರಮಾಣದ ಪಿಂಚಣಿಯನ್ನು ಪರಿವರ್ತಿಸಿ ಇಡಿಗಂಟಿನ ಮೊತ್ತವನ್ನು ಪಡೆಯಬಹುದಾಗಿದೆ.

16. ದಿನಾಂಕ: 01-04-2006 ರ ನಂತರ ಹೊಸದಾಗಿ ಸರ್ಕಾರಿ ಸೇವೆಗೆ ಸೇರುವ ಎಲ್ಲಾ ನೌಕರರು ವಂತಿಗೆ ಆಧಾರಿತ ಪಿಂಚಣಿ ಯೋಜನೆಯಾದ 'ರಾಷ್ಟ್ರೀಯ ಪಿಂಚಣಿ ಯೋಜನೆ' ಯ ವ್ಯಾಪ್ತಿಗೆ ಕಡ್ಡಾಯವಾಗಿ ಒಳಪಡುತ್ತಾರೆ. ಈ ಯೋಜನೆಯ ಅನ್ವಯ ಸರ್ಕಾರಿ ನೌಕರನ ಮೂಲವೇತನ ಮತ್ತು ತುಟ್ಟಿಭತ್ಯೆಯ ಶೇ.10 ರಷ್ಟು ವಂತಿಗೆಯನ್ನು ಸರ್ಕಾರಿ ನೌಕರರು ಭರಿಸಬೇಕಿದ್ದು, ಸರ್ಕಾರವು ಶೇ.14 ರಷ್ಟು ವಂತಿಗೆಯನ್ನು ಸೇರಿಸಿ ಪಿಂಚಣಿ ನಿಧಿಯಲ್ಲಿ ಹೂಡುತ್ತದೆ. ನಿವೃತ್ತಿ ಹೊಂದುವ ನೌಕರರು ಈ ರೀತಿ ಹೂಡಲಾದ ನಿಧಿಯಿಂದ ಇಡಿಗಂಟಿನ ಮೊತ್ತ ಮತ್ತು ವರ್ಷಾಸನ ಪಡೆಯುತ್ತಾರೆ. ಕಾಲಕಾಲಕ್ಕೆ ತರಲಾದ ಬದಲಾವಣೆಗಳೊಂದಿಗೆ

ಕೇಂದ್ರ ಸರ್ಕಾರವು ನೌಕರರಿಗೆ ಜಾರಿಗೊಳಿಸಿರುವ ಯೋಜನೆಯ ಮಾದರಿಯಲ್ಲಿ ರಾಜ್ಯ ಸರ್ಕಾರವು ತನ್ನ ನೌಕರರಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಿದೆ.

17. ಈ ಹಿನ್ನೆಲೆಯಲ್ಲಿ 7ನೇ ರಾಜ್ಯ ವೇತನ ಆಯೋಗವು ತನ್ನ ಪರಿಶೀಲನಾರ್ಹ ಅಂಶಗಳ ಮೇಲೆ ವರದಿಯನ್ನು ಸಲ್ಲಿಸಬೇಕಾಗಿದೆ. ಈ ಉದ್ದೇಶಕ್ಕಾಗಿ ಆಯೋಗವು ಪ್ರಾರಂಭಿಕವಾಗಿ ಸಾರ್ವಜನಿಕರು, ಸರ್ಕಾರಿ ನೌಕರರು ಮತ್ತು ಪಿಂಚಣಿದಾರರು, ಮಾನ್ಯತೆ ಪಡೆದ ನೌಕರರ ಸಂಘಗಳು, ವಿಶ್ವವಿದ್ಯಾಲಯಗಳು, ಸ್ಥಳೀಯ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಿಂದ ಪ್ರತಿಕ್ರಿಯೆಗಳನ್ನು ಆಹ್ವಾನಿಸಲು ಪ್ರಶ್ನಾವಳಿಗಳನ್ನು ಪ್ರಕಟಿಸಲು ಬಯಸುತ್ತದೆ. ಅದರಂತೆಯೇ, ಗೌರವಾನ್ವಿತ ಸಂಸತ್ತಿನ ಸದಸ್ಯರುಗಳು / ವಿಧಾನಸಭೆ ಸದಸ್ಯರುಗಳು / ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ಇತರೆ ಪ್ರಮುಖ ಚುನಾಯಿತ ಪ್ರತಿನಿಧಿಗಳಿಂದಲೂ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರನ್ನೊಳಗೊಂಡಂತೆ ಹಿರಿಯ ಅಧಿಕಾರಿಗಳಿಂದಲೂ ಅಭಿಪ್ರಾಯಗಳನ್ನು ಪಡೆಯಲಾಗುತ್ತದೆ.

18. ಸರ್ಕಾರಿ ನೌಕರರು ಮತ್ತು ಪಿಂಚಣಿದಾರರು ಪ್ರಶ್ನಾವಳಿ - ಎ ನಮೂನೆಯಲ್ಲಿ ಉತ್ತರಗಳನ್ನು ಒದಗಿಸಬೇಕಾಗುತ್ತದೆ. ಪ್ರಶ್ನಾವಳಿ - ಬಿ ಮತ್ತು ಸಿ ನಮೂನೆಗಳು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರುಗಳು ಉತ್ತರಗಳನ್ನು ನೀಡುವ ಉದ್ದೇಶಕ್ಕಾಗಿವೆ. ವಿಶ್ವವಿದ್ಯಾಲಯಗಳು, ಸ್ಥಳೀಯ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳು ಪ್ರಶ್ನಾವಳಿ - ಡಿ, ಇ, ಎಫ್ ಗಳಲ್ಲಿ ಕ್ರಮವಾಗಿ ಉತ್ತರಗಳನ್ನು ನೀಡಬೇಕಾಗುತ್ತವೆ. ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಪ್ರಶ್ನಾವಳಿ - ಜಿ ನಮೂನೆಯಲ್ಲಿ ಆಹ್ವಾನಿಸಲಾಗಿದೆ.

19. ವ್ಯಕ್ತಿಗಳು, ಮಾನ್ಯತೆ ಪಡೆದ ನೌಕರರ ಮತ್ತು ಪಿಂಚಣಿದಾರರ ಸಂಘಗಳು, ಸಂಘ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಅಥವಾ ಇನ್ನಿತರ ಆಸಕ್ತಿಯುಳ್ಳ ವ್ಯಕ್ತಿಗಳು ಅಭಿಪ್ರಾಯಗಳನ್ನು ಪ್ರಶ್ನಾವಳಿ - ಎ ಮತ್ತು ಜಿ ನಮೂನೆಗಳಲ್ಲಿ ಸಲ್ಲಿಸಬಹುದಾಗಿದೆ. ಪ್ರತಿಕ್ರಿಯೆ ನೀಡುವವರಿಂದ ಅವರ ಸಂಪೂರ್ಣ ಅಂಚೆ ವಿಳಾಸ, ಇ-ಮೇಲ್ ವಿಳಾಸ ಮತ್ತು ಸಂಪರ್ಕಿಸುವ ದೂರವಾಣಿ ಸಂಖ್ಯೆಯ ವಿವರಗಳನ್ನು ಆಯೋಗವು ಬಯಸುತ್ತದೆ. ಪ್ರಶ್ನಾವಳಿಗಳಿಗೆ ಅಭಿಪ್ರಾಯಗಳು ಮತ್ತು ಯಾವುದೇ ಮೆಮೋರಾಂಡಂಗಳನ್ನು ಸದಸ್ಯ ಕಾರ್ಯದರ್ಶಿ, 7ನೇ ರಾಜ್ಯ ವೇತನ ಆಯೋಗ, 3ನೇ ಮಹಡಿ, ಔಷಧ ನಿಯಂತ್ರಣ ಇಲಾಖೆಯ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು - 560001 ಇವರಿಗೆ ದಿನಾಂಕ: 10-02-2023 ಅಥವಾ ಅದಕ್ಕೂ ಮುನ್ನ ತಲುಪುವಂತೆ ಕಳುಹಿಸಲು ಕೋರಿದೆ.

| 2022 – 23 ರ ಬಜೆಟ್ ಅಂದಾಜುಗಳ ಪ್ರಕಾರ ಇಲಾಖೆಗಳ ಪಟ್ಟಿ ಮತ್ತು ಕಾರ್ಯ ಸಾಮರ್ಥ್ಯದ ವಿವರಗಳು | | | | |
|---|---|---|---|---|
| ಕ್ರ. ಸಂ. | ಇಲಾಖೆ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ |
| 1 | ಕೃಷಿ ಇಲಾಖೆ | 10,324 | 4,008 | 6,316 |
| 2 | ಪಶು ಸಂಗೋಪನೆ ಇಲಾಖೆ | 18,553 | 8,581 | 9,972 |
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 15,287 | 7,224 | 8,063 |
| 4 | ಸಹಕಾರ ಇಲಾಖೆ | 7,196 | 2,458 | 4,738 |
| 5 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 10,986 | 5,248 | 5,738 |
| 6 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) | 77 | 2 | 75 |
| 7 | ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | 12 | 8 | 4 |
| 8 | ಇಂಧನ ಇಲಾಖೆ | 452 | 207 | 245 |
| 9 | ಆರ್ಥಿಕ ಇಲಾಖೆ | 18,892 | 10,113 | 8,779 |
| 10 | ಮೀನುಗಾರಿಕೆ ಇಲಾಖೆ | 1,401 | 624 | 777 |
| 11 | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 2,478 | 1,291 | 1,187 |
| 12 | ಅರಣ್ಯ ಇಲಾಖೆ | 13,124 | 8,562 | 4,562 |
| 13 | ಕೈಮಗ್ಗ ಮತ್ತು ಜವಳಿ ಇಲಾಖೆ | 82 | 43 | 39 |
| 14 | ಉನ್ನತ ಶಿಕ್ಷಣ ಇಲಾಖೆ | 24,785 | 12,111 | 12,674 |
| 15 | ಒಳಾಡಳಿತ ಇಲಾಖೆ | 1,26,913 | 1,03,356 | 23,557 |
| 16 | ತೋಟಗಾರಿಕೆ ಇಲಾಖೆ | 6,196 | 3,104 | 3,092 |
| 17 | ಮಾಹಿತಿ ಇಲಾಖೆ | 577 | 258 | 319 |

| | | | | |
|---|---|---|---|---|
| 18 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ | 75 | 15 | 60 |
| 19 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 596 | 173 | 423 |
| 20 | ಕಾರ್ಮಿಕ ಇಲಾಖೆ | 4,352 | 1,852 | 2,500 |
| 21 | ಕಾನೂನು ಇಲಾಖೆ | 26,879 | 18,509 | 8,370 |
| 22 | ಪ್ರಮುಖ ಮತ್ತು ಮಧ್ಯಮ ಕೈಗಾರಿಕೆಗಳು | 604 | 251 | 353 |
| 23 | ಪ್ರಮುಖ ನೀರಾವರಿ ಇಲಾಖೆ | 1,404 | 904 | 500 |
| 24 | ಗಣಿಗಾರಿಕೆ ಇಲಾಖೆ | 1,155 | 478 | 677 |
| 25 | ಸಣ್ಣ ನೀರಾವರಿ ಇಲಾಖೆ | 2,418 | 1,323 | 1,095 |
| 26 | ಅಲ್ಪ ಸಂಖ್ಯಾಂತರ ಕಲ್ಯಾಣ ಇಲಾಖೆ | 5,619 | 1,986 | 3,633 |
| 27 | ಸಂಸದೀಯ ವ್ಯವಹಾರಗಳು ಇಲಾಖೆ | 1,613 | 1,178 | 435 |
| 28 | ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | 2,044 | 762 | 1,282 |
| 29 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 2,81,862 | 2,15,803 | 66,059 |
| 30 | ಲೋಕೋಪಯೋಗಿ ಇಲಾಖೆ | 6,799 | 4,736 | 2,063 |
| 31 | ಕಂದಾಯ ಇಲಾಖೆ | 32,309 | 21,688 | 10,621 |
| 32 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 28,223 | 17,814 | 10,409 |
| 33 | ಸಮಾಜ ಕಲ್ಯಾಣ ಇಲಾಖೆ | 15,177 | 5,585 | 9,592 |
| 34 | ಪರಿಶಿಷ್ಟ ಪಂಗಡ ಕಲ್ಯಾಣ | 2,758 | 440 | 2,318 |
| 35 | ರೇಷ್ಮೆ ಇಲಾಖೆ | 4,560 | 1,758 | 2,802 |
| 36 | ಕೌಶಲ್ಯಾಭಿವೃದ್ಧಿ ಇಲಾಖೆ | 6,838 | 2,622 | 4,216 |
| 37 | ಸಣ್ಣ ಪ್ರಮಾಣದ ಕೈಗಾರಿಕೆಗಳು | 563 | 207 | 356 |

| | | | | |
|---|---|---|---|---|
| 38 | ಪ್ರವಾಸೋದ್ಯಮ ಇಲಾಖೆ | 440 | 154 | 286 |
| 39 | ಸಾರಿಗೆ ಇಲಾಖೆ | 2,806 | 1,204 | 1,602 |
| 40 | ನಗರಾಭಿವೃದ್ಧಿ ಇಲಾಖೆ | 1,433 | 594 | 839 |
| 41 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 6,940 | 3,710 | 3,230 |
| 42 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 322 | 115 | 207 |
| 43 | ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ | 74,857 | 40,213 | 34,644 |
| ಒಟ್ಟು | | **7,69,981** | **5,11,272** | **2,58,709** |

# Annexure

## 7th STATE PAY COMMISSION OF KARNATAKA

1. Government of Karnataka has constituted the 7th State Pay Commission to consider revision of pay scales of State Government employees, employees of Aided Educational Institutions and Local Bodies, and Non-Teaching Staff of Universities and to recommend a new pay structure for them. The Commission has been specifically asked to examine the feasibility of adopting the Central pay structure by determining the equivalence of posts between the cadres in the Central and State Governments.

2. The Commission has also been asked to suggest changes, if any, with regard to Pensions, Dearness Allowance (DA), House Rent Allowance (HRA), City Compensatory Allowance (CCA), Medical facilities, and other benefits. In making its recommendations, the Pay Commission is required to keep in view the resources of the State Government and its commitments for various development programmes and schemes, statutory and regulatory functions, debt - servicing obligations, and other non - development requirements within the overall mandate of the Karnataka Fiscal Responsibility Act, 2002.

3. The pay and allowances of State Government employees, employees of Aided Educational Institutions and Local Bodies, and Non-Teaching staff of the Universities have generally been revised once in five years either on the recommendations of a Pay Commission or of an Official Pay Committee. The pay and allowances were last revised with effect from 01-07-2017 on the basis of the recommendations of the 6th State Pay Commission which were implemented during 2018 with monetary benefits effective from 01-04-2018.

4. The criteria generally considered for evolving new pay structures / pay scales of Government employees include the qualifications and training for different posts, degrees of responsibility, areas of jurisdiction, occupational hazards, required levels of decision - making, avenues of promotion, horizontal and vertical relativity in similar jobs in various Departments, and historical relativities in pay scales evolved over a period of time.

5. The basic objectives of a government's work include, among others, the maintenance of law and order, provision of social services and infrastructure, the welfare of the vulnerable sections of society, protection of the environment, and promotion of economic development and equitable opportunities. To achieve these objectives, the State Government has employed about 5 lakh employees in government departments (is this current) at various levels in the entire State. Of these employees, nearly 80% are employed in Police, Health, Education, Rural Development, Irrigation, Agriculture, and Social Welfare sectors.

6. The number of retired employees / families of retired employees receiving pension from the State Government is about 5.11 lakhs. During 2022 - 23 the expenditure on salary and pensions is estimated to be Rs.41,288/- crores and Rs.24,016/- crores respectively. The expenditure on pay amounts to 21.70% and on pension 12% of the State's total revenues (tax + non-tax + devolution). In addition, the State Government also provides grant-in-aid to meet the salary expenditure and pension payments of employees of Aided Educational Institutions and Local Bodies, and Non-Teaching staff of the Universities.

7. The present pay scales have been arrived at on the recommendations of the 6th State Pay Commission, linking them with the cost of living index at 276.9 points (AIACPI) (IW) 2001 series by merging the Dearness Allowance obtainable on 01-07-2017. These scales are effective from 01-07-2017. A master pay scale with 92 stages has been adopted by the State Government with 25 standard scales segmented out of this master scale.

8. The existing total minimum emoluments paid to employees is Rs.26,850/- p.m., at Bengaluru and Rs.23,630/- in rural areas. These emoluments include DA, HRA, and CCA admissible to them. The present ratio between the minimum pay in the lowest scale and the maximum pay in the highest scale is 1:8.86. The ratio between the maximum in the lowest scale and the maximum in the highest scale is 1:5.20.

9. The rates of annual increment range from Rs.400/- to Rs.3,100/- in different pay scales. Additional increments are granted if an employee stagnates in the same post without promotion on reaching 20 years, 25 years or 30 years of service. Further, employees reaching the maximum of any pay scale are given up to 8 stagnation annual increments.

10. Increases in cost of living are neutralized by the revision in payment of Dearness Allowance (DA) twice a year, based on 12 monthly rise in AIACPI index. The admissible House Rent Allowance (HRA) and City Compensatory Allowance (CCA) vary with the basic pay of the employee and the place of work according to the classification of cities / other places based on population. The present rate of HRA is 24%,16% and 8% for places classified as A, B and C respectively. The rate of CCA in Bengaluru (BBMP area) for both Group - C and D employees is Rs.500/- and for Group - A and B officers Rs.600/- per month. The rates of CCA in the Urban Agglomerations of Belagavi, Mangaluru, Mysuru, Kalaburagi and Hubballi - Dharwada range from Rs.400/- to Rs.450/- per month.

11. Over a period of time Government has streamlined the reimbursement of medical expenses by including treatment availed in specified private medical institutions / hospitals and also specifying the rate of reimbursement of medical expenses for various types of ailments. This is in addition to payment of medical allowance of Rs.200/- per month to Group - C & D employees. Government has also introduced a cashless scheme called 'Karnataka Arogya Sanjeevini

Scheme - KASS' on dated: 05-09-2022 which covers many procedures and surgeries for the benefit of the employees and their families.

12. Employees with disabilities and employees having children with disabilities are entitled to certain special allowances. These include conveyance allowance for disabled employees at 6% of basic pay and 30% of basic pay subject to a maximum of Rs.40,000/- of the cost of the motorized / mechanical vehicle purchased by the employee. Government employees having children with disabilities are given educational allowance / maintenance allowance at Rs.1000/- per month per child for two children only.

13. Other allowances given for certain specified categories of posts include Conveyance Allowance, Uniform Allowance, Risk Allowance, Fixed Travelling Allowance and Special Allowance at rates varying from Rs.100/- to Rs.8,500/- per month. Government employees are also allowed encashment of earned leave (EL) up to 15 days per year and a maximum of 300 days of accumulated earned leave on retirement. Women employees are eligible for 180 days of maternity leave. Leave Travel Concession (LTC) for travel anywhere in India is allowed twice during the service of Government Employees.

14. The age of retirement of State Government employees is 60 years and it is on par with the retirement age of Central Government employees. Retiring employees who have completed 30 years of qualifying service are eligible for full pension at the rate of 50% of the last basic pay drawn and proportionate pension in cases where service rendered is less than 30 years. As per the existing rules, an employee with 15 years of qualifying service or who has completed 50 years of age can seek Voluntary Retirement. On retirement, employees receive Death Cum Retirement Gratuity subject to a maximum of Rs.20 lakh or 16.5 times of basic pay, whichever is less.

15. Family Pension is admissible on the death of an employee / pensioner at 30% of the last pay drawn subject to a minimum of Rs.8,500/- and a maximum of Rs.45,180/- per month. Retiring employees are also permitted to commute 1/3rd of their pension to receive a lump sum amount at the time of retirement.

16. All Government employees joining government service on or after 1st April 2006 are mandatorily covered under a contributory pension scheme called the 'National Pension Scheme'(NPS) with a contribution of 14% of basic pay + DA from the Government and 10% of basic pay + DA from the employee to be invested in a pension fund. The retiring employees receive the lump sum and annuities from the accumulated funds so invested. The scheme is being implemented on the lines defined by Central Government., for its employees with changes from time to time as effected by the Central Government.

17. It is in this background, the 7$^{th}$ State Pay Commission is required to submit its report on the Terms of Reference. For this purpose, as the first step, based on the terms of reference, the Commission would like to issue the questionnaires

to invite responses from the general public, government employees and pensioners, recognized associations of employees, Universities, Local Bodies, and Aided Educational Institutions. Further, responses are being similarly sought from Hon`ble MPs / MLAs / MLCs and other important elected representatives and senior functionaries in Government including Additional Chief Secretaries / Principal Secretaries / Secretaries to Government and Heads of Departments separately.

18. The responses of Government employees and pensioners are to be submitted in the format containing Questionnaire - A, Questionnaires - B and C are meant for responses from Additional Chief Secretaries / Principal Secretaries / Secretaries to Government and Heads of Departments. Universities, Local Bodies, and Aided Educational Institutions are required to submit their responses to the questions in Questionnaires - D, E, and F respectively. The responses of the general public are invited in Questionnaire - G.

19. Responses to Questionnaires A and G may be submitted by individuals, recognized associations of employees and pensioners, associations of persons and non - governmental organizations, or by any other interested body / persons. The Commission would like all respondents to disclose their complete postal address e-mail Id and telephone numbers. Replies to the questionnaires along with Memoranda, if any, should be sent to the Member Secretary, 7th Pay Commission of Karnataka, 3rd floor, Drugs Control Department Building, Palace Road, Bengaluru – 560001 so as to reach on or before 10-02-2023.

| List of Departments and Working Strength as per the 2022-23 Budget Estimates | | | | |
|---|---|---|---|---|
| SN | Department | Sanctioned | Working | Vacant |
| 1 | Agriculture | 10,324 | 4,008 | 6,316 |
| 2 | Animal Husbandry | 18,553 | 8,581 | 9,972 |
| 3 | Backward Class Welfare | 15,287 | 7,224 | 8,063 |
| 4 | Cooperation | 7,196 | 2,458 | 4,738 |
| 5 | Department of Personal Administrative Reforms (DPAR) | 10,986 | 5,248 | 5,738 |
| 6 | E-Governance | 77 | 2 | 75 |
| 7 | Ecology & Environment | 12 | 8 | 4 |
| 8 | Energy | 452 | 207 | 245 |
| 9 | Finance | 18,892 | 10,113 | 8,779 |
| 10 | Fisheries | 1,401 | 624 | 777 |
| 11 | Food & Civil Supplies | 2,478 | 1,291 | 1,187 |
| 12 | Forest | 13,124 | 8,562 | 4,562 |
| 13 | Handloom & Textiles | 82 | 43 | 39 |
| 14 | Higher Education | 24,785 | 12,111 | 12,674 |
| 15 | Home | 1,26,913 | 1,03,356 | 23,557 |
| 16 | Horticulture | 6,196 | 3,104 | 3,092 |
| 17 | Information | 577 | 258 | 319 |
| 18 | Information Technology and Bio-Technology | 75 | 15 | 60 |

| | | | | |
|---|---|---|---|---|
| 19 | Kannada & Culture | 596 | 173 | 423 |
| 20 | Labour | 4,352 | 1,852 | 2,500 |
| 21 | Law | 26,879 | 18,509 | 8,370 |
| 22 | Major & Medium Industries | 604 | 251 | 353 |
| 23 | Major Irrigation | 1,404 | 904 | 500 |
| 24 | Mining | 1,155 | 478 | 677 |
| 25 | Minor Irrigation | 2,418 | 1,323 | 1,095 |
| 26 | Minority Welfare | 5,619 | 1,986 | 3,633 |
| 27 | Parliamentary Affairs | 1,613 | 1,178 | 435 |
| 28 | Planning, Statistics, Science & Technology | 2,044 | 762 | 1,282 |
| 29 | Primary & Secondary Education | 2,81,862 | 2,15,803 | 66,059 |
| 30 | Public Works | 6,799 | 4,736 | 2,063 |
| 31 | Revenue | 32,309 | 21,688 | 10,621 |
| 32 | Rural Development & Panchayath Raj | 28,223 | 17,814 | 10,409 |
| 33 | Social Welfare | 15,177 | 5,585 | 9,592 |
| 34 | Scheduled Tribes Welfare | 2,758 | 440 | 2,318 |
| 35 | Sericulture | 4,560 | 1,758 | 2,802 |
| 36 | Skill Development Department | 6,838 | 2,622 | 4,216 |
| 37 | Small Scale Industries | 563 | 207 | 356 |
| 38 | Tourism | 440 | 154 | 286 |
| 39 | Transport | 2,806 | 1,204 | 1,602 |
| 40 | Urban Development | 1,433 | 594 | 839 |
| 41 | Women & Child Development | 6,940 | 3,710 | 3,230 |
| 42 | Youth Empowerment & Sports | 322 | 115 | 207 |
| 43 | Health and Medical Education | 74,857 | 40,213 | 34,644 |
| | **Total** | **7,69,981** | **5,11,272** | **2,58,709** |

ಪ್ರಶ್ನಾವಳಿ ಎ-ಜಿಇ & ಪಿ
Questionnaire A-GE & P

## 7ನೇ ಕರ್ನಾಟಕ ರಾಜ್ಯ ವೇತನ ಆಯೋಗ

## 7th STATE PAY COMMISSION OF KARNATKA

## ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಪ್ರಶ್ನಾವಳಿ

## QUESTIONNAIRE FOR GOVERNMENT EMPLOYEES AND PENSIONERS

1. ಸರ್ಕಾರಿ ನೌಕರರ ವೇತನ ಶ್ರೇಣಿ / ಹೊಸ ವೇತನ ರಚನೆ ಕುರಿತು ವೇತನ ಆಯೋಗಗಳು ಸಾಮಾನ್ಯವಾಗಿ ಅಳವಡಿಸಿಕೊಂಡಿರುವ ಸಾಮಾನ್ಯ ಮಾನದಂಡಗಳು ಈ ಕೆಳಕಂಡಂತಿವೆ:

The criteria generally adopted by the State Pay Commissions to evolve new pay structures / pay scales for government employees have broadly been as indicated below:

i. ಅಗತ್ಯ ವಿದ್ಯಾರ್ಹತೆ, ಕೌಶಲ್ಯ ಮತ್ತು ತರಬೇತಿ;

Qualification, Skills, and Training Requirements;

ii. ಜವಾಬ್ದಾರಿಯ ಪ್ರಮಾಣ;

Degree of responsibility;

iii. ಕಾರ್ಯವ್ಯಾಪ್ತಿಯ ಕ್ಷೇತ್ರ;

Extent of jurisdiction;

iv. ವೃತ್ತಿ ಸಂಬಂಧಿ ತೊಂದರೆಗಳು;

Occupational hazards;

v. ನಿರ್ಣಯ ಕೈಗೊಳ್ಳುವ ಹಂತ;

Level of decision - making;

vi. ಲಭ್ಯವಿರುವ ಬಡ್ತಿಯ ಅವಕಾಶಗಳು;

Avenues of promotion available;

vii. ವಿವಿಧ ಇಲಾಖೆಗಳಲ್ಲಿರುವ ಸಮಾನ ದರ್ಜೆಯ ಹುದ್ದೆಗಳ ತುಲನಾತ್ಮಕ ಸ್ವರೂಪ;

Horizontal and vertical relativities in similar jobs in other departments;

viii. ಕಾಲಕಾಲಕ್ಕೆ ಸ್ಥಾಪಿಲಾದ ವೇತನ ಶ್ರೇಣಿಗಳ ಪರಸ್ಪರ ಅಂತರ/ಹೋಲಿಕೆಗಳು;

Relativities in pay scales established over a period of time.

ಪ್ರಚಲಿತ ಪರಿಸ್ಥಿತಿಯಲ್ಲಿ ಮೇಲಿನ ಅಂಶಗಳು ಪ್ರಸ್ತುತ/ಸಮರ್ಪಕವೆಂದು ಭಾವಿಸುತ್ತೀರಾ? ನಿಮ್ಮ ಅನಿಸಿಕೆಯಲ್ಲಿ ಪ್ರಸ್ತುತವೆನಿಸುವ ಇತರ ಯಾವುದೇ ಅಂಶಗಳಿದ್ದಲ್ಲಿ, ದಯವಿಟ್ಟು ನಮೂದಿಸಿ.

Do you consider the above factors adequate / relevant in the present situation? Please suggest any other factors that you feel may be relevant.

2. ಸರ್ಕಾರಿ ಸೇವೆಯಲ್ಲಿ ಹಾಲಿ ಜಾರಿಯಲ್ಲಿರುವ ಕೆಲಸದ ಅವಧಿ, ರಜಾ ಸೌಲಭ್ಯಗಳು ಮತ್ತು ಸಾರ್ವಜನಿಕ ರಜಾ ದಿನಗಳ ಬಗ್ಗೆ ನಿಮ್ಮ ದೃಷ್ಟಿ ಕೋನವೇನು?

What are your views on the existing office hours, leave facilities and public holidays?

3. ವೇತನ ಹೆಚ್ಚಳದಿಂದ ಉಂಟಾಗುವ ಹೆಚ್ಚುವರಿ ವೆಚ್ಚವನ್ನು ಸ್ವಲ್ಪ ಮಟ್ಟಿಗೆ ಸರಿದೂಗಿಸಲು ಸರ್ಕಾರದ ವೆಚ್ಚಗಳಲ್ಲಿ ಮಿತವ್ಯಯ ಸಾಧಿಸಲು ಯಾವುದಾದರೂ ನಿರ್ದಿಷ್ಟ ಸಲಹೆಗಳಿವೆಯೇ?

Do you have any specific suggestions for effecting economy in government expenditure so as to offset to some extent the increased expenditure on emoluments?

4. ಸರ್ಕಾರಿ ನೌಕರರ ವೇತನ ಪರಿಷ್ಕರಣೆಯ ಬಗ್ಗೆ ಶಿಫಾರಸ್ಸು ಮಾಡುವಾಗ ಆಯೋಗವು ನೆರೆ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದಲ್ಲಿ ಜಾರಿಯಲ್ಲಿರುವ ವೇತನ ಶ್ರೇಣಿಗಳನ್ನು ಪರಿಗಣಿಸಬೇಕೆ?

Should the Commission consider the pay scales in neighbouring States as well as the Central Government while recommending revision in the pay scales?

5. ಸರ್ಕಾರಿ ನೌಕರರಿಗೆ ಹೊಸ ವೇತನ ರಚನೆಯನ್ನು ಶಿಫಾರಸು ಮಾಡುವಾಗ ಆಯೋಗವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಹುದ್ದೆಗಳ ಸಮಾನತೆಯನ್ನು ನಿರ್ಧರಿಸುವ ಮೂಲಕ ಕೇಂದ್ರ ಸರ್ಕಾರದ ವೇತನ ರಚನೆಯನ್ನು ಅಳವಡಿಸಿಕೊಳ್ಳುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸುವ ಅಗತ್ಯವಿದೆ. ಅಂತಹ ಸಮಾನತೆಯ ಸಾಧ್ಯತೆ ಮತ್ತು ಸಮಂಜಸವೆನಿಸಬಹುದಾದ ಹುದ್ದೆಗಳ ಪ್ರವರ್ಗಗಳ ಕುರಿತು ದಯವಿಟ್ಟು ಸಲಹೆಗಳನ್ನು ಸಮರ್ಥನೆಯೊಂದಿಗೆ ಒದಗಿಸುವುದು.

While recommending the new pay structure for government employees, the Commission is required to examine the feasibility of adopting the Central Government pay structure by determining the equivalence of posts between the cadres in the Central and State Governments. Please provide your suggestions regarding the categories of posts where such equivalence is feasible and reasonable, with justification.

6. ಸರ್ಕಾರವು ದಿನಾಂಕ: 01-07-2017 ರಿಂದ ಜಾರಿಗೊಳಿಸಿರುವ ಮುಖ್ಯ ವೇತನ ಶ್ರೇಣಿ ಬಗ್ಗೆ ಹಾಗೂ ಈ ಮುಖ್ಯ ಶ್ರೇಣಿಯನ್ನು 25 ಪ್ರತ್ಯೇಕ ವೇತನ ಶ್ರೇಣಿಗಳಾಗಿ ವಿಭಾಗಿಸಿರುವ ಬಗ್ಗೆ ಅಭಿಪ್ರಾಯವೇನು? ನಿಮ್ಮ ಅಭಿಪ್ರಾಯದಲ್ಲಿ ಇದು ಸೂಕ್ತವೇ? ಈ ಬಗ್ಗೆ ನಿಮ್ಮ ಯಾವುದೇ ಅಭಿಪ್ರಾಯ ಮತ್ತು ಸಲಹೆಗಳಿದ್ದಲ್ಲಿ, ನೀಡುವುದು. (ಪ್ರಸ್ತುತ ಜಾರಿಯಲ್ಲಿರುವ ಮುಖ್ಯ ವೇತನ ಶ್ರೇಣಿ ಹಾಗೂ ವೇತನ ಶ್ರೇಣಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.)

What is your opinion with regard to the Master Scale adopted by the State Government since 01-07-2017 and the 25 Standard Scales segmented out of this Master Scale? Do you consider this appropriate? Give your comments and suggestions in this regard. (The existing Master Pay Scales and Standard Pay Scales are furnished in the Annexure.)

7. ಸರ್ಕಾರಿ ನೌಕರರ ಪ್ರಸ್ತುತ ವೇತನ ಶ್ರೇಣಿಯನ್ನು ದಿನಾಂಕ: 01-07-2017 ರಂದು ಇದ್ದ 12 ತಿಂಗಳ ಸರಾಸರಿ ಬಳಕೆದಾರರ ಬೆಲೆ ಸೂಚ್ಯಂಕದ 276.9 (AIACPI) ಸೂಚ್ಯಂಕದ ಆಧಾರದಲ್ಲಿ ರೂಪಿಸಲಾಗಿದೆ. ನಿಮ್ಮ ಅಭಿಪ್ರಾಯದಲ್ಲಿ, ನೂತನ ವೇತನ ಶ್ರೇಣಿಯನ್ನು AIACPI ಯ ಯಾವ ಬಿಂದುವಿನ ಆಧಾರದ ಮೇಲೆ ರೂಪಿಸಬೇಕು?

The existing pay structure for government employees is determined with reference to the 12 monthly average consumer price index of 276.9 (AIACPI level) obtainable on 01-07-2017. In your opinion, what should be the AIACPI reference point to determine the new pay structure?

8. ಈಗ ಜಾರಿಯಲ್ಲಿರುವ ವೇತನ ಶ್ರೇಣಿಗಳಲ್ಲಿ (ವೇತನ + ತುಟ್ಟಿ ಭತ್ಯೆ + ಮನೆಬಾಡಿಗೆ ಭತ್ಯೆ + ನಗರ ಪರಿಹಾರ ಭತ್ಯೆ ಸೇರಿ) ಮಾಹೆಯಾನ ಕನಿಷ್ಟ ವೇತನ ಬೆಂಗಳೂರಿನಲ್ಲಿ ರೂ.26,850/- ಮತ್ತು ಗ್ರಾಮಾಂತರ ಪ್ರದೇಶದಲ್ಲಿ ರೂ.23,630/- ಇರುತ್ತದೆ. ಹಾಲಿ ಜೀವನ ನಿರ್ವಹಣಾ ವೆಚ್ಚವನ್ನು ಪರಿಗಣಿಸಿದ್ದಲ್ಲಿ ವೇತನ ಎಷ್ಟಿರಬೇಕು?

Under existing pay scales, the total minimum emoluments paid (including Pay + DA + HRA + CCA) is Rs. 26,850/- per month in Bengaluru and Rs. 23,630/- per month in rural areas respectively. Keeping the current cost of living in view, what should be the emoluments?

9. ಈಗ ಅತ್ಯಂತ ಕೆಳಗಿನ ವೇತನ ಶ್ರೇಣಿಯ ಕನಿಷ್ಠ ವೇತನ ಮತ್ತು ಅತ್ಯಂತ ಮೇಲಿನ ವೇತನ ಶ್ರೇಣಿಯ ಗರಿಷ್ಟ ವೇತನ ಇವುಗಳ ನಡುವಿನ ಅನುಪಾತ 1:8.86 ರಷ್ಟಿದ್ದು, ಅತ್ಯಂತ ಕೆಳಗಿನ ವೇತನ ಶ್ರೇಣಿಯ ಗರಿಷ್ಟ ವೇತನ ಮತ್ತು ಅತ್ಯಂತ ಮೇಲಿನ ವೇತನ ಶ್ರೇಣಿಯ ಗರಿಷ್ಟವೇತನ ಇವುಗಳ ನಡುವಿನ ಅನುಪಾತ 1:5.20 ರಷ್ಟಿದೆ. ಈ ಅನುಪಾತಗಳನ್ನು ಪುನರ್‌ಪರಿಶೀಲಿಸಬೇಕು / ಮಾರ್ಪಡಿಸಬೇಕು ಎಂದು ನೀವು ಭಾವಿಸುತ್ತೀರಾ?

The present ratio between the minimum pay in the lowest scale and the maximum pay on the highest scale is 1:8.86. The ratio between the maximum on the lowest scale and the maximum on the highest scale is 1:5.20. Do you think these ratios need to be reviewed / modified?

10. ವಿವಿಧ ವೇತನ ಶ್ರೇಣಿಗಳ ನಡುವೆ ಈಗ ಇರುವ ಹೋಲಿಕೆಯು, ವಿವಿಧ ಹಂತಗಳಿಗೆ ಅನ್ವಯಿಸುವ ಜವಾಬ್ದಾರಿಗಳಿಗೆ ಅನುಗುಣವಾಗಿದೆಯೇ? ಯಾವುದಾದರೂ ನಿರ್ದಿಷ್ಟ ಹಂತಗಳಲ್ಲಿ ವಿಷಯದಲ್ಲಿ ಬದಲಾವಣೆ ಅಗತ್ಯವಿದ್ದರೆ, ದಯವಿಟ್ಟು ಕಾರಣಗಳನ್ನು ತಿಳಿಸುವುದು.

Do you feel that the existing relativity among the different scales of pay is commensurate with the responsibilities attached to each level? Do you suggest any changes in respect of any specific levels? If so, please furnish details.

11. ನಿಮ್ಮ ಅಭಿಪ್ರಾಯದಲ್ಲಿ ಸರ್ಕಾರಿ ನೌಕರರಿಗೆ ತಮ್ಮ ಸೇವಾ ಅವಧಿಯಲ್ಲಿ ಎಷ್ಟು ಮುಂಬಡ್ತಿಗೆ ಅವಕಾಶಗಳಿರಬೇಕು (30-35 ವರ್ಷಗಳ ಅವಧಿಯಲ್ಲಿ)?

In your opinion, how many promotional opportunities should a government employee have in a career (of 30-35 years)?

12. ನಿಮ್ಮ ಪ್ರಕಾರ ಕನಿಷ್ಠ ವಾರ್ಷಿಕ ವೇತನ ಬಡ್ತಿ ದರವು ಎಷ್ಟಿರಬೇಕು? ಮತ್ತು ಯಾವುದೇ ಒಂದು ವೇತನ ಶ್ರೇಣಿಯಲ್ಲಿ ಅಥವಾ ಬೇರೆ ಬೇರೆ ವೇತನ ಶ್ರೇಣಿಗಳಲ್ಲಿನ ವೇತನ ಬಡ್ತಿಗಳ ನಡುವೆ ಯಾವ ರೀತಿಯ ವ್ಯತ್ಯಾಸ / ಅಂತರ ಇರಬೇಕು?

What according to you should be the minimum rate of annual increment and what should be the difference between increments within any scale or between two scales?

13. ಪ್ರಸ್ತುತ 8 ವಾರ್ಷಿಕ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಲಾಗುತ್ತಿದೆ. ಇದು ಸಮರ್ಪಕವೆಂದು ನೀವು ಭಾವಿಸುತ್ತಿರಾ? ಇಲ್ಲದಿದ್ದಲ್ಲಿ, ಈ ಸ್ಥಗಿತ ವೇತನ ಬಡ್ತಿಯ ವಿಷಯದಲ್ಲಿ ಯಾವುದೇ ಬದಲಾವಣೆಯನ್ನು ಸಲಹೆ ಮಾಡುತ್ತೀರಾ?

In the present system, 8 stagnation annual increments are granted. Do you consider this adequate? If not, what changes do you suggest in this regard?

14. ಸಚಿವಾಲಯ ಸಿಬ್ಬಂದಿ ಮತ್ತು ಸಚಿವಾಲಯೇತರ ಸಿಬ್ಬಂದಿಗಳಲ್ಲಿ ಹೋಲಿಸಬಹುದಾದ / ಸಮಾನ ಹುದ್ದೆಗಳಿಗೆ ಸಮಾನ ವೇತನ ಶ್ರೇಣಿ ನೀಡುವ ಕುರಿತಂತೆ ನಿಮ್ಮ ಅನಿಸಿಕೆಯೇನು?

What are your views on parity in the pay scales of Secretariat Staff and the Non-Secretariat Staff holding comparable / similar posts?

15. ವಿಶೇಷ ಭತ್ಯೆ(ಗಳ)ಗೆ ಸಂಬಂಧಿಸಿದಂತೆ ಯಾವುದಾದರೂ ಹುದ್ದೆಗಳ ಭತ್ಯೆಯ ಪ್ರಮಾಣವನ್ನು ಪರಿಷ್ಕರಿಸುವ ಅಗತ್ಯವಿದೆಯೆಂದು ಭಾವಿಸುತ್ತೀರಾ? ದಯವಿಟ್ಟು ವಿವರಗಳನ್ನು ಸಮರ್ಥನೆಯೊಂದಿಗೆ ನೀಡಿರಿ.

Is there a need for revision in special allowance in respect of any post or category of posts? If yes, give details with justification.

16. ತುಟ್ಟಿ ಭತ್ಯೆ ಮಂಜೂರಾತಿಯು ಸಂಬಳದ ವಾಸ್ತವಿಕ ವರಮಾನವನ್ನು ಬೆಲೆ ಏರಿಕೆಯಿಂದ ಉಂಟಾಗುವ ಪರಿಣಾಮದಿಂದ ರಕ್ಷಿಸುವ ಪರಿಣಾಮಕಾರಿ ತಂತ್ರವೆಂದು ನೀವು ಭಾವಿಸುತ್ತೀರಾ? ಗ್ರಾಹಕ ಬೆಲೆ ಸೂಚ್ಯಂಕವು ನಿಗದಿತ ಹಂತವನ್ನು ತಲುಪಿದಾಗ ಸ್ವಯಂ ಚಾಲಿತವಾಗಿ ತುಟ್ಟಿಭತ್ಯೆ ಮಂಜೂರು ಮಾಡಬೇಕೆಂದನ್ನು ಒಪ್ಪುತ್ತೀರಾ? ಇಲ್ಲವಾದ್ದಲ್ಲಿ, ಮಾರ್ಪಾಟುಗಳಿಗೆ ಸಕಾರಣಗಳೊಂದಿಗೆ ಸಲಹೆಯನ್ನು ನೀಡುವುದು.

Do you consider Dearness Allowance as an effective device for protection of real income from salaries against the rise in prices? Do you agree that the grant of DA should be automatic on the average price index reaching the prescribed level? If not, please give suggestions for modifications with reasons.

17. ಹಾಲಿ ಜಾರಿಯಲ್ಲಿರುವ ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ದರಗಳು ವಾಸ್ತವಿಕ ಮತ್ತು ಸಮಂಜಸವೆಂದು ನೀವು ಅಭಿಪ್ರಾಯಪಡುವಿರಾ? ಇಲ್ಲದಿದ್ದಲ್ಲಿ, ಕಾರಣಗಳ ಸಹಿತ ನೀವು ಪರಿಗಣಿಸುವ ಸಮಂಜಸ ದರವೇನು ಮತ್ತು ಏಕೆ ಎಂದು ದಯವಿಟ್ಟು ಸೂಚಿಸಿರಿ.

Do you consider that the existing rates of House Rent Allowance (HRA) and City Compensatory Allowance (CCA) are realistic and reasonable? If not, please suggest what you consider reasonable and why.

18. ಪ್ರಸ್ತುತ ನೌಕರರ ಸಂಪೂರ್ಣ ಸೇವಾವಧಿಯಲ್ಲಿ ಎರಡು ಬಾರಿ ಮಾತ್ರ ರಜಾ ಪ್ರಯಾಣ ರಿಯಾಯಿತಿಯನ್ನು ನೀಡಲು ಈರುವ ಅವಕಾಶದಲ್ಲಿ ಯಾವುದೇ ಮಾರ್ಪಡಿಸಲು ಸಲಹೆ ಮಾಡುವಿರಾ? ಹಾಗಿದ್ದಲ್ಲಿ, ದಯವಿಟ್ಟು ಸಲಹೆಗಳನ್ನು ಕಾರಣಗಳೊಂದಿಗೆ ನೀಡುವುದು.

Do you suggest modification of the existing system of Leave Travel Concession (LTC) which is twice in one's entire service? If so, please give your suggestions with reasons.

19. ಖಾಸಗಿ ವೈದ್ಯಕೀಯ ಸಂಸ್ಥೆಗಳು / ಆಸ್ಪತ್ರೆಗಳನ್ನು ಸರ್ಕಾರವು ಮಾನ್ಯ ಮಾಡುತ್ತಾ ಮತ್ತು ಹಲವು ತರಹದ ಖಾಯಿಲೆಗಳಿಗೆ ತಗಲುವ ವೈದ್ಯಕೀಯ ವೆಚ್ಚದ ಮರುಪಾವತಿಯ ದರವನ್ನು ನಿಗದಿಗೊಳಿಸಿ, ವೈದ್ಯಕೀಯ ವೆಚ್ಚದ ಮರುಪಾವತಿಯ ಸೌಲಭ್ಯವನ್ನು ಸರ್ಕಾರವು ಕಾಲಕಾಲಕ್ಕೆ ಸರಳೀಕರಣಗೊಳಿಸಿದೆ. ಅಲ್ಲದೇ, ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ - ಕೆ.ಕೆ.ಎಸ್.ಎಸ್. ಎಂಬ ನಗದುರಹಿತ ಯೋಜನೆಯನ್ನು ಜಾರಿಗೊಳಿಸಿದೆ. ಅಲ್ಲದೇ ಗ್ರೂಪ್-ಸಿ ಮತ್ತು ಗ್ರೂಪ್-ಡಿ ದರ್ಜೆಯ ನೌಕರರಿಗೆ ಮಾಸಿಕ ರೂ.200/- ವೈದ್ಯಕೀಯ ಭತ್ಯೆಯಾಗಿ ಮಂಜೂರು ಮಾಡಿದೆ. ಈ ನಿಟ್ಟಿನಲ್ಲಿ ಸುಧಾರಣೆ ಮಾಡಲು ಸಲಹೆಗಳು ಏನಾದರೂ ಇದ್ದಲ್ಲಿ ನೀಡುವುದು.

Over a period of time, the State Government has streamlined the facility of medical reimbursement by recognizing treatment in private medical institutions / hospitals and also specifying the rate of reimbursement of medical expenses for various types of ailments. It has also introduced a cashless scheme called *"Karnataka Arogya Sanjivini Scheme - KASS".* This apart, medical allowance of Rs.*200*/- per month is paid to Group C & D employees. Do you have any suggestions for improvement in this regard?

20. ಪ್ರಸ್ತುತ ಜಾರಿಯಲ್ಲಿರುವ ಸೇವಾ ಪರಿಸ್ಥಿತಿಯು ಮಹಿಳಾ ಉದ್ಯೋಗಿಗಳ ವಿಶೇಷ ಸಮಸ್ಯೆಗಳ ಕುರಿತು ಸಾಕಷ್ಟು ಗಮನ ನೀಡಿದೆ ಎಂದು ಅಭಿಪ್ರಾಯಪಡುವಿರಾ? ಇಲ್ಲವಾದಲ್ಲಿ, ಪರಿಸ್ಥಿತಿಯ ಸುಧಾರಣೆಗೆ ಸಲಹೆಗಳೇನು?

Do you feel that existing service conditions relating to women employees take care of their special needs? If not, what are your suggestions for improvement?

21. ಈ ಕೆಳಕಂಡ ಭತ್ಯೆಗಳಿಗೆ ಇರುವ ಅರ್ಹತಾ ಷರತ್ತು ಮತ್ತು ಮೊತ್ತದ ಕುರಿತು ಸಲಹೆಗಳೇನಾದರೂ ಇದೆಯೆ?

What are your suggestions regarding the conditions of eligibility for and quantum of the following allowances?

i. ವಾಹನ ಭತ್ಯೆ

Conveyance Allowance

ii. ಸಮವಸ್ತ್ರ ಭತ್ಯೆ

Uniform Allowance

iii. ಅಪಾಯ ಸಂಭವ ಭತ್ಯೆ

Risk Allowance

ಪ್ರಭಾರ ಭತ್ಯೆ

Charge Allowance

iv. ನಿಗಧಿತ ಪ್ರಯಾಣ ಭತ್ಯೆ

Fixed Travelling Allowance

v. ಅನ್ಯ ಸೇವೆ ಭತ್ಯೆ

Foreign Service Allowance

vi. ವಿಶೇಷ ಭತ್ಯೆ

Special Allowance

22. ವರ್ಗಾವಣೆಯಾದ ಒಬ್ಬ ನೌಕರನಿಗೆ ಮಂಜೂರು ಮಾಡುವ ಈಗಿರುವ ವರ್ಗಾವಣೆ ಅನುದಾನ ಮತ್ತು ಸಾಮಾನು ಸರಂಜಾಮು ಸಾಗಣೆ ಭತ್ಯೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

What are your views on the amount of transfer grant and baggage allowance admissible to an employee on transfer?

23. ಅಧಿಕೃತ ಪ್ರಯಾಣ / ಪ್ರವಾಸದ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳ ದರಗಳನ್ನು ಮಾರ್ಪಡಿಸುವ ಅಗತ್ಯವಿದೆಯೆಂದು ಭಾವಿಸುವಿರಾ? ಹೌದಾದಲ್ಲಿ ಸೂಕ್ತ ಭತ್ಯೆ ಎಷ್ಟೆಂದು ಸೂಚಿಸುವುದು?

Do you think the rates of travelling and daily allowances on official travel /tour require modifications? If so, what rates do you suggest as appropriate?

24. ಈ ಕೆಳಕಂಡ ಸೌಲಭ್ಯಗಳಲ್ಲಿ ಅಗತ್ಯವಿರುವ ಯಾವುದಾದರೂ ಬದಲಾವಣೆಗಳ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ತಿಳಿಸಿ.

Please furnish your views on any changes needed in the following benefits:

a) ರಜೆ ಸೌಲಭ್ಯಗಳು ಮತ್ತು ಸೇವೆಯಲ್ಲಿ ಇರುವಾಗ ಮತ್ತು ನಿವೃತ್ತಿ ಸಂದರ್ಭದಲ್ಲಿ ಗಳಿಕೆ ರಜೆ ನಗಧೀಕರಣ ಸೌಲಭ್ಯ

Leave Entitlements and Encashment of Earned Leave while in service and at the time of retirement.

b) ಬೈಸಿಕಲ್, ಮೋಟಾರು ವಾಹನ, ಗೃಹ ನಿರ್ಮಾಣ, ಗೃಹ ರಿಪೇರಿ ಮುಂಗಡ ಇತ್ಯಾದಿ

Advances for purchase of bicycle, vehicle and house construction, house repair, etc.

c) ಅಂಧ ಮತ್ತು ಅಂಗವಿಕಲ ನೌಕರರಿಗೆ ಈಗ ನೀಡಲಾಗುತ್ತಿರುವ ಮಾಹೆಯಾನ ಮೂಲ ವೇತನದ ಶೇಕಡ 6 ರಂತೆ ವಾಹನ ಭತ್ಯೆ.

Conveyance Allowance being paid at 6% of the basic pay per month to the Blind and Orthopedically Handicapped Employees.

25. ಸರ್ಕಾರಿ ನೌಕರರಿಗೆ ಅನ್ವಯಿಸುವ ಪ್ರಸಕ್ತ ಸಮೂಹ ವಿಮಾ ಯೋಜನೆಯನ್ನು ಇನ್ನಷ್ಟು ಸುಧಾರಣೆ ಮಾಡಲು ನಿಮ್ಮ ಸಲಹೆಗಳೇನಾದರೂ ಇದೆಯೇ?

Do you have any suggestions for improvement of the existing Group Insurance Scheme applicable to Government employees?

26. ಸ್ವಇಚ್ಛಾ ನಿವೃತ್ತಿಗೆ ಸಂಬಂಧಪಟ್ಟ ನಿಯಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?
What are your views on the present rules relating to voluntary retirement?

27. ಪಿಂಚಣಿ ಪ್ರಯೋಜನಗಳಿಗೆ ಸಂಬಂಧಿಸಿದಂತೆ, ದಯವಿಟ್ಟು ಕೆಳಕಂಡ ಅಂಶಗಳನ್ನು ಓದಿಕೊಂಡು ತಮ್ಮ ಸೂಕ್ತ ಪ್ರತಿಕ್ರಿಯೆಯನ್ನು ಒದಗಿಸುವುದು.
With regard to the pensionary benefits, please read and provide appropriate response.

(i) ಪ್ರಸ್ತುತ, 30 ವರ್ಷಗಳ ಅರ್ಹತಾ ಸೇವೆಯನ್ನು ಪೂರ್ಣಗೊಳಿಸಿದ ಸರ್ಕಾರಿ ನೌಕರರಿಗೆ ಮಾತ್ರ ಪೂರ್ಣನಿವೃತ್ತಿ ವೇತನ ಸಂದಾಯವಾಗುತ್ತದೆ. ನಿವೃತ್ತಿಯ ಉಪದಾನವನ್ನು ಲೆಕ್ಕ ಹಾಕುವಾಗ ಮೂಲ ವೇತನವನ್ನಷ್ಟೇ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಇದರ ಮಾರ್ಪಾಡಿಗೆ ಏನಾದರೂ ಸಲಹೆ ನೀಡುವಿರಾ? ಈ ಮಾರ್ಪಾಡಿಗೆ ಕಾರಣಗಳನ್ನು ನೀಡುವುದು.

At present full pension is payable to Government employees who have put in a qualifying service of 30 years. While computing the pension, only basic pay is taken into consideration. Do you suggest any modifications in this regard? If so, please give reasons.

(ii) ಪ್ರಸ್ತುತ ಕನಿಷ್ಠ ಪಿಂಚಣಿ ಮತ್ತು ಕುಟುಂಬ ವಿಶ್ರಾಂತಿ ವೇತನವು ಮಾಹೆಯಾನ ರೂ.8,500/- ಆಗಿದ್ದು, ತುಟ್ಟಿ ಭತ್ಯೆಯನ್ನು ಸಹ ಸೇರಿಸಲಾಗುತ್ತದೆ. ನಿವೃತ್ತಿ ವೇತನದ ಗರಿಷ್ಠ ಮೊತ್ತವು ರೂ.45,180/- ಆಗಿರುತ್ತದೆ. ಈ ಮೊತ್ತವು ತಕ್ಕುದಾಗಿದೆಯೆಂದು ತಾವು ಭಾವಿಸುವಿರಾ? ಇಲ್ಲವಾದಲ್ಲಿ ಕನಿಷ್ಟ ಮತ್ತು ಗರಿಷ್ಠ ಕುಟುಂಬ ಪಿಂಚಣಿಯು ಎಷ್ಟಿರಬೇಕು?
The minimum Pension and Family Pension per month are Rs. 8,500 + DA and the maximum pension and family pension are Rs. 75300 + DA and 45180 + DA respectively. Do you consider this adequate? If not, what should be the minimum and maximum family pension?

(iii) ನಿವೃತ್ತಿದಾರರಿಗೆ ನೀಡುವುದು ಯುಕ್ತವೆಂದು ಭಾವಿಸುವ ಇತರೆ ಸೌಲಭ್ಯಗಳಾವುವು?

What are the other benefits you consider as reasonable for pensioners?

(iv) ನಿವೃತ್ತಿ ವೇತನದ ಗರಿಷ್ಠ 1/3 ನೇ ಭಾಗವನ್ನು ಹಾಲಿ ಪರಿವರ್ತನೆಗೊಳಿಸಬಹುದಾಗಿದ್ದು (ಪಿಂಚಣಿ ಪರಿವರ್ತನೆ), 15 ವರ್ಷಗಳ ನಂತರ ಇದರ ಪುನಃ ಸ್ಥಾಪನೆಯ ವ್ಯವಸ್ಥೆ ಇರುತ್ತದೆ. ಇದರ ಮಾರ್ಪಾಡಿಗೆ ಸಲಹೆ ಏನಾದರೂ ಇದೆಯೇ?

At present, a maximum of 1/3rd of the pension can be commuted (Commutation of Pension) and it is restored after 15 years. Do you think any modification is required?

28. ಈಗ ಚಾಲ್ತಿಯಲ್ಲಿರುವ ನಿವೃತ್ತಿ ವೇತನದ ನಿಯಮ ಮತ್ತು ನಿಬಂಧನೆಗಳಿಂದ ಪಿಂಚಣಿದಾರರಿಗೆ ಅದರಲ್ಲೂ ತೀರಾ ವಯಸ್ಸಾದ ಪಿಂಚಣಿದಾರರಿಗೆ ನಿವೃತ್ತಿ ವೇತನವನ್ನು ಸಕಾಲದಲ್ಲಿ ಪಡೆದುಕೊಳ್ಳುವಲ್ಲಿ ಏನಾದರೂ ತೊಂದರೆಗಳಿವೆಯೇ? ಹಾಗಿದ್ದಲ್ಲಿ, ಇವುಗಳನ್ನು ಸರಳಿಕರಣಗೊಳಿಸಲು ನೀವು ಸಲಹೆ ನೀಡಲು ಬಯಸುವಿರಾ?

Do the existing pension rules and regulations cause any difficulties to the pensioners, especially those who are too old and unable to get their pension early / in time? Do you have any suggestions for the simplification of the process?

29. ನಿವೃತ್ತಿದಾರರಿಗೆ ಕೊಡಲಾಗುವ ತುಟ್ಟಿಭತ್ಯವು ಏರುತ್ತಿರುವ ಜೀವನ ನಿರ್ವಹಣಾ ವೆಚ್ಚದ ಹೆಚ್ಚಳವನ್ನು ಸರಿದೂಗಿಸಲು ಸಮರ್ಪಕವಾಗಿದೆಯೇ? ಈ ಬಗ್ಗೆ ನಿಮ್ಮ ನಿರ್ದಿಷ್ಟ ಸಲಹೆಗಳೇನು?

Is the Dearness Allowance now sanctioned adequate to take care of the rise in the cost of living of pensioners? What are your specific suggestions in this regard?

30. ಪ್ರಸ್ತುತ ನಿವೃತ್ತಿದಾರರಿಗೆ ಅವರು 80, 85, 90, 95, 100 ಹಾಗೂ ಅದಕ್ಕೂ ಮೇಲ್ಪಟ್ಟ ವರ್ಷ ವಯಸ್ಸನ್ನು ತಲುಪಿದಾಗ ಕ್ರಮವಾಗಿ ಶೇ.20, ಶೇ.30, ಶೇ.40, ಶೇ.50 ಮತ್ತು ಶೇ.100 ರಷ್ಟು ಹೆಚ್ಚುವರಿ ನಿವೃತ್ತಿ ವೇತನ ನೀಡಲಾಗುತ್ತಿದೆ. ಸದರಿ ನಿಯಮಾವಳಿಗಳಿಗೆ ಬದಲಾವಣೆ ಅಗತ್ಯವಿದೆಯೇ?

At present pensioners are being paid additional pension of 20%, 30%, 40%, 50%, and 100% on attaining the age of 80, 85, 90, 95, 100 and above years respectively. Is there any need for modification of these rules?

31. ಈಗ ನೀಡುತ್ತಿರುವಂತೆ ಮೂಲ ವೇತನದ ಶೇ.30 ರ ಕುಟುಂಬ ಪಿಂಚಣಿಯ ಪ್ರಮಾಣ ಸಮರ್ಪಕವಾಗಿದೆಯೇ?

Is the quantum of family pension, now being paid at 30% of the basic pay, adequate?

32. ಕಾಲಕಾಲಕ್ಕೆ ತರಲಾದ ಬದಲಾವಣೆಗಳೊಂದಿಗೆ ಕೇಂದ್ರ ಸರ್ಕಾರವು ತನ್ನ ನೌಕರರಿಗೆ ಜಾರಿಗೊಳಿಸಿರುವ ಮಾದರಿಯಲ್ಲಿ ರಾಜ್ಯ ಸರ್ಕಾರವು ತನ್ನ ನೌಕರರಿಗೆ ಎನ್.ಪಿ.ಎಸ್ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಯನ್ನು ಮತ್ತಷ್ಟು ಸರಳೀಕರಣಗೊಳಿಸಲು ಅಥವಾ ಸುಧಾರಣೆಗೆ ಯಾವುದೇ ಸಲಹೆಗಳಿವೆಯೇ?

The NPS scheme is being implemented by the state government on the lines defined by the Central Government for its employees with changes from time to time. Do you have any suggestions for its further simplification or improvement?

33. ಪ್ರಶ್ನಾವಳಿಯಲ್ಲಿ ಒಳಗೊಂಡಿರದ ಆದರೆ ಆಯೋಗದ ಉಲ್ಲೇಖದ ನಿಯಮಗಳಿಗೆ ಸಂಬಂಧಿಸಿದ ಇತರ ವಿಷಯಗಳ ಕುರಿತು ಮಾಡಲು ಯಾವುದೇ ಸಲಹೆಗಳನ್ನು ಹೊಂದಿದ್ದರೆ, ದಯವಿಟ್ಟು ಅದನ್ನು ಒದಗಿಸಿ.

If you have any suggestions to make on other matters not covered in the questionnaire but relevant to the terms of reference of the Commission, please furnish the same.

| | |
|---|---|
| ಸಹಿ<br>Signature | |
| ದಿನಾಂಕ<br>Date | |
| ಹೆಸರು ಮತ್ತು ಪದನಾಮ<br>Name and Designation | |
| ವಿಳಾಸ<br>Address | |
| ಇ – ಮೇಲ್ ಐಡಿ<br>E-mail ID | |
| ದೂರವಾಣಿ (ಸ್ಥಿರ/ಮೊಬೈಲ್)<br>Telephone Number<br>(Landline / Mobile) | |

<u>ಅನುಬಂಧ</u>

<u>ANNEXURE</u>

| |
|---|
| 1. ಅಸ್ತಿತ್ವದಲ್ಲಿರುವ ಮುಖ್ಯ ವೇತನ ಶ್ರೇಣಿ<br>Existing Master Scale |
| 17000-400-18600-450-20400-500-22400-<br>550-24600-600-27000-650-29600-750-<br>32600-850-36000-950-39800-1100-46400-<br>1250-53900-1450-62600-1650-72500-1900-83900-2200-97100-2500-112100-2800-<br>128900-3100-150600 |
| ಕನಿಷ್ಟ: 17000; ಗರಿಷ್ಟ: 150600<br>Minimum: 17000; Maximum: 150600 |
| ವೇತನ ಹಂತದ ಸಂಖ್ಯೆ: 92<br>Number of Pay Stages: 92 |
| 2. ವಾರ್ಷಿಕ ವೇತನ ಬಡ್ತಿ<br>Annual Increment Rates |
| 400,450,500,550,600,650,750,850,950,1100,1250,1450,1650,1900,2200,2500,2800,3100<br>(18) |

| |
|---|
| ವಾರ್ಷಿಕ ವೇತನ ಬಡ್ತಿಯ ವೇತನ ಹಂತ<br><br>Pay Stages of Increment Rates |
| 17000,18600,20400,22400,24600,27000,29600,32600,36000,39800,46400,53900,62600, 72500,83900,97100, 112100,128900,150600 (ವೇತನ ಹಂತದ ಒಟ್ಟು ಸಂಖ್ಯೆ: 19)17000,18600,20400,22400,24600,27000,29600,32600,36000,39800,46400,53900,62600, 72500,83900,97100, 112100,128900,150600 (No. of Pay Stages: 19) |
| 4. ಕನಿಷ್ಠ ಮತ್ತು ಗರಿಷ್ಠ ವೇತನದ ಅನುಪಾತ - 1: 8.86<br><br>4. Ratio of Minimum and Maximum Pay - 1:8.86 |

| SN | ಪ್ರಚಲಿತ ವೇತನ ಶ್ರೇಣಿ<br><br>Existing Pay Scales | ಅವಧಿ (ವರ್ಷ<br><br>Span (Years) |
|---|---|---|
| 1 | 17000-400-18600-450-20400-500-22400-550-24600-600-27000-650-28950 | 23 |
| 2 | 18600-450-20400-500-22400-550-24600-600-27000-650-29600-750-32600 | 24 |
| 3 | 19950-450-20400-22400-550-24600-600-27000-650-29600-750-32600-50-36000-950- 37900 | 27 |
| 4 | 21400-500-22400-550-24600-600-27000-650-29600-750-32600-850-36000-950-39800- 1100-42000 | 28 |
| 5 | 23500-550-24600-600-27000-650-29600-750-32600-850-36000-950-39800-1100-46400- 1250-47650 | 29 |
| 6 | 25800-600-27000-650-29600-750-32600-850-36000-950-39800-1100-46400-1250-51400 | 28 |
| 7 | 27650-650-29600-750-32600-850-36000-950-39800-1100-46400-1250-52650 | 26 |
| 8 | 30350-750-32600-850-36000-950-39800-1100-46400-1250-53900-1450-58250 | 26 |
| 9 | 33450-850-36000-950-39800-1100-46400-1250-53900-1450-62600 | 25 |
| 10 | 36000-950-39800-1100-46400-1250-53900-1450-62600-1650-67550 | 25 |

| | | |
|---|---|---|
| 11 | 37900-950-39800-1100-46400-1250-53900-1450-62600-1650-70850 | 25 |
| 12 | 40900-1100-46400-1250-53900-1450-62600-1650-72500-1900-78200 | 26 |
| 12 | 40900-1100-46400-1250-53900-1450-62600-1650-72500-1900-78200 | 26 |
| 13 | 43100-1100-46400-1250-53900-1450-62600-1650-72500-1900-83900 | 27 |
| 14 | 45300-1100-46400-1250-53900-1450-62600-1650-72500-1900-83900-2200-88300 | 27 |
| 15 | 48900-1250-53900-1450-62600-1650-72500-1900-83900-2200-92700 | 26 |
| 16 | 52650-1250-3900-450-62600-1650-72500-1900-83900-2200-97100 | 25 |
| 17 | 56800-1450-62600-1650-72500-1900-83900-2200-97100-2500-99600 | 23 |
| 18 | 61150-1450-62600-1650-72500-1900-83900-2200-97100-2500-102100 | 21 |
| 19 | 67550-1650-72500-1900-83900-2200-97100-2500-104600 | 18 |
| 20 | 70850-1650-72500-1900-83900-2200-97100-2500-107100 | 17 |
| 21 | 74400-1900-83900-2200-97100- 2500-109600 | 16 |
| 22 | 82000-1900-83900-2200-97100-2500-112100-2800-117700 | 15 |
| 23 | 90500-2200-97100-2500-112100- 2800-123300 | 13 |
| 24 | 97100-2500-112100-2800-128900- 3100-141300 | 16 |
| 25 | 104600-2500-112100-2800-128900-3100-150600 | 17 |

| |
|---|
| <u>ಪ್ರಶ್ನಾವಳಿ ಬಿ-ಅಮುಕಾ/ಪ್ರಕಾ/ಕಾ</u><br><u>Questionnaire B - ACS/PS/S</u> |

# 7ನೇ ಕರ್ನಾಟಕ ರಾಜ್ಯ ವೇತನ ಆಯೋಗ

# 7th STATE PAY COMMISSION OF KARNATAKA

## ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳಿಗೆ ಸಂಬಂಧಿಸಿದ ಪ್ರಶ್ನಾವಳಿ

## Questionnaire for Additional Chief Secretaries, Principal Secretaries, Secretaries to Govt.

<u>ಪ್ರಶ್ನಾವಳಿಗೆ ಉತ್ತರಿಸುವ ಪ್ರಾಧಿಕಾರದ ವಿವರಗಳು:</u>

Details of the Authority replying to the questionnaire:

ಅ) ಹೆಸರು ಮತ್ತು ಪದನಾಮ:

Name and Designation;

ಆ) ಇಲಾಖೆಯ ಹೆಸರು:

Name of the Department;

ಇ) ಈ ಇಲಾಖೆಯಲ್ಲಿ ಸಲ್ಲಿಸಿದ ಸೇವೆಯ ಅವಧಿ:

Period of Service in the Department;

ಈ) ಕಳೆದ 5 ವರ್ಷಗಳಲ್ಲಿ ಸೇವೆ ಸಲ್ಲಿಸಿದ ಇಲಾಖೆಗಳ ಅಥವಾ ಹುದ್ದೆಗಳ ವಿವರ

Details of Departments / Posts held during the last 5 years

1. ನಿಮ್ಮ ಅಭಿಪ್ರಾಯದ ಪ್ರಕಾರ ವೇತನ ಸ್ವರೂಪವನ್ನು ನಿರ್ಧರಿಸಲು ಕೆಳಕಂಡ ಅಂಶಗಳಲ್ಲದೆ ಬೇರೆ ಯಾವುದಾದರೂ ಅಂಶಗಳನ್ನು ಪರಿಗಣಿಸಬೇಕೆ?

   In your view, while determining the pay structure, in addition to the following factors should any other factor be considered?

ಅ) ಹುದ್ದೆಗೆ ಅಗತ್ಯವಿರುವ ವಿದ್ಯಾರ್ಹತೆ ಮತ್ತು ಪ್ರಾವೀಣ್ಯತೆ;

Qualification and experience required for the post;

ಆ) ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯ ಸರ್ಕಾರಗಳ ಸಿಬ್ಬಂದಿಗಳು ಪ್ರಸ್ತುತ ಪಡೆಯುತ್ತಿರುವ ಸಂಬಳದ ಹೋಲಿಕೆ;

Comparison with the current remuneration of staff employed in the Government of India and other State Governments;

ಇ) ಸರ್ಕಾರದ ಆರ್ಥಿಕ ಸಾಮರ್ಥ್ಯ

Financial capacity of the government;

ಈ) ಸರ್ಕಾರಿ ನೌಕರರ ಯೋಗ್ಯ ಜೀವನ ಮಟ್ಟ

Decent Living Standards for government employees.

2. ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಮತ್ತು ರಾಜ್ಯದ ಸರ್ಕಾರಿ ನೌಕರರ ಕಾರ್ಯ ನಿರ್ವಹಣಾ ಪರಿಸ್ಥಿತಿಯನ್ನು ಗಮನದಲ್ಲಿರಿಸಿ, ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳು ಕೇಂದ್ರದ ವೇತನ ಶ್ರೇಣಿಗಳಿಗೆ ಸಮನವಾಗಿ ಇರತಕ್ಕದ್ದೆಂದು ಭಾವಿಸುತ್ತೀರಾ?

Considering the financial position of the State Government and the working conditions of State Government employees, do you feel that the pay scales of the State Government employees should be on par with Central pay scales?

3. ತಮ್ಮ ಅಭಿಪ್ರಾಯದಲ್ಲಿ ಅರ್ಹತೆ, ನೇಮಕಾತಿ ವಿಧಾನ, ಕರ್ತವ್ಯ ಮತ್ತು ಜವಾಬ್ದಾರಿಗಳು ಮತ್ತು ಅಧಿಕಾರ ವ್ಯಾಪ್ತಿಯ ಆಧಾರದಲ್ಲಿ ಭಾರತ ಸರ್ಕಾರದ ಯಾವ ಹುದ್ದೆಗಳೊಂದಿಗೆ ಸಮನಾಮಂತರಗೊಳಿಸಬಹುದಾದ ತಮ್ಮ ಇಲಾಖೆಯ ಹುದ್ದೆಗಳು ಯಾವುವು? ದಯವಿಟ್ಟು ಕೆಳಗಿನ ನಮೂನೆಯಲ್ಲಿ ವಿವರಗಳನ್ನು ಒದಗಿಸಿ:

In your view which are the posts in your department that can be equated with which posts in the Government of India, in terms of qualifications, method of recruitment, duties & responsibilities and jurisdiction? Please furnish details in the format below:

| ಕ್ರ.ಸಂ<br>SN | ಕರ್ನಾಟಕ ಸರ್ಕಾರದಲ್ಲಿನ ಹುದ್ದೆಯ ಪ್ರವರ್ಗ<br>Category of posts in GOK | ಕೇಂದ್ರ ಸರ್ಕಾರದಲ್ಲಿನ ಹುದ್ದೆಯ ಪ್ರವರ್ಗ<br>Category of posts in GOI | ಸಮರ್ಥನೆ<br>Justification |
|---|---|---|---|
| 1 | 2 | 3 | 4 |
| | | | |

4. ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ಜೀವನ ವೆಚ್ಚವನ್ನು ಸರಿದೂಗಿಸಲು ರಾಜ್ಯ ಸರ್ಕಾರವು ಅಳವಡಿಸಿಕೊಂಡಿರುವ ಹಾಲಿ ಜಾರಿಯಲ್ಲಿರುವ ತುಟ್ಟಿಭತ್ಯೆ ಸೂತ್ರವು ಸಮರ್ಪಕವಾಗಿದೆ ಎಂದು ನೀವು ಭಾವಿಸುತ್ತೀರಾ? ಇಲ್ಲದಿದ್ದರೆ, ಜೀವನ ನಿರ್ವಹಣಾ ವೆಚ್ಚದ ಏರಿಕೆಯನ್ನು ಹೇಗೆ ಸಮರ್ಪಕವಾಗಿ ಸರಿದೂಗಿಸಬಹುದು? ಈ ಬಗ್ಗೆ ಯಾವುದಾದರೂ ಸಲಹೆಗಳಿದ್ದರೆ ದಯವಿಟ್ಟು ನೀಡಿ.

   Do you feel that the existing DA formula adopted by the State government is adequate to compensate for the price rise and increasing cost of living? If not, how can the increased cost of living be adequately compensated? Please offer your suggestions, if any.

5. ನಿಮ್ಮ ಇಲಾಖೆಯಲ್ಲಿನ ವಿವಿಧ ಪ್ರವರ್ಗದ ಹುದ್ದೆಗಳಿಗೆ ಅಸ್ತಿತ್ವದಲ್ಲಿರುವ ವೇತನ ಶ್ರೇಣಿಗಳು ಸಮಂಜಸ ಮತ್ತು ಸೂಕ್ತವೆಂದು ಭಾವಿಸುತ್ತೀರಾ? ಇಲ್ಲದಿದ್ದರೆ, ಯಾವ ಹುದ್ದೆಗಳ ವರ್ಗಗಳಿಗೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಬೇಕಾಗಿದೆ. ದಯವಿಟ್ಟು ಅದಕ್ಕೆ ಸಮರ್ಥನೆಯೊಂದಿಗೆ ವಿವರಗಳನ್ನು ನೀಡಿ.

   Do you feel that existing pay scales assigned to different categories of posts in your Department are reasonable and appropriate? If not, which are the categories of posts whose pay scales need to be revised? Please give details with justification for the same.

6. ನಿಮ್ಮ ಇಲಾಖೆಯಲ್ಲಿರುವ ವಿವಿಧ ವರ್ಗದ ಹುದ್ದೆಗಳನ್ನು ವಿಲೀನಗೊಳಿಸುವ ಅಗತ್ಯವಿದೆ ಎಂದು ಭಾವಿಸುತ್ತೀರಾ? ಹಾಗಿದ್ದಲ್ಲಿ, ಹುದ್ದೆಗಳು ಮತ್ತು ಅವುಗಳ ಕರ್ತವ್ಯದ ವಿವರಗಳೊಂದಿಗೆ ಅಭಿಪ್ರಾಯವನ್ನು ನೀಡುವುದು.

   Do you feel that there is a need for merging different categories of posts in your Department? If so, please offer your views with details of posts and the nature of their functions.

7. ನಿಮ್ಮ ಇಲಾಖೆಯಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಯಾವ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಒದಗಿಸಲು ಸಲಹೆ ನೀಡುತ್ತೀರಿ?

   What special training programs do you suggest for the capacity building of officers and staff in your Department?

   ಎ) ಕಾರ್ಯನಿರ್ವಾಹಕ ಸಿಬ್ಬಂದಿ

      For Operational staff

   ಬಿ) ಸಹಾಯಕ ಸಿಬ್ಬಂದಿ

      For Supporting staff

   ಸಿ) ಅಧಿಕಾರಿಗಳು.

      For Officers.

8. ನಿಮ್ಮ ಇಲಾಖೆಯ ಯಾವುದೇ ವರ್ಗದ ಹುದ್ದೆಗಳಲ್ಲಿ ವೃತ್ತಿ ಪ್ರಗತಿಗಾಗಿ ತರಬೇತಿ / ಕೌಶಲ್ಯ ಅಭಿವೃದ್ಧಿ/ ಪುನರ್ ಮನನ ಕಾರ್ಯಕ್ರಮವನ್ನು ಕಡ್ಡಾಯಗೊಳಿಸಬಹುದೇ? ಹೌದು ಎಂದಾದರೆ, ಸೂಚಿಸಲಾದ ಹುದ್ದೆಗಳು ಮತ್ತು ಕಾರ್ಯಕ್ರಮಗಳನ್ನು ಈ ಕೆಳಗಿನ ನಮೂನೆಯಲ್ಲಿ ಸೂಚಿಸುವುದು:

Can any training/ skill development/ refresher program be made mandatory for career advancement in any category of posts in your Department? If yes, the category of posts and program suggested may be indicated in the format given below:

| ಕ್ರ.ಸಂ<br>SN | ಹುದ್ದೆಗಳ ವರ್ಗ<br>Category of posts | ಸೂಚಿಸಬಹುದಾದ ಕಾರ್ಯಕ್ರಮ<br>Program indicated |
|---|---|---|
| 1 | 2 | 3 |
| | | |

9. ಇಲಾಖೆಯ ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಯಾವ ಕ್ರಮಗಳನ್ನು ಸಲಹೆ ಮಾಡುತ್ತೀರಿ.

What measures do you suggest for economy in expenditure of the Department?

10. ಇಲಾಖೆಯ ಕಾರ್ಯನಿರ್ವಾಹಕ ಸಿಬ್ಬಂದಿಗೆ ಆಡಳಿತಾತ್ಮಕ ಕೆಲಸವನ್ನು ನಿರ್ವಹಿಸಲು ಹಾಗೂ ಆಡಳಿತ ಸಿಬ್ಬಂದಿಗೆ ಕಾರ್ಯನಿರ್ವಾಹಕ ಕೆಲಸವನ್ನು ನಿರ್ವಹಿಸಲು ತರಬೇತಿ ನೀಡಲು ಸಾಧ್ಯವೆಂದು ನೀವು ಭಾವಿಸುತ್ತೀರಾ? ಹೌದು ಎಂದಾದರೆ, ಅದಕ್ಕೆ ಮಾರ್ಗಗಳನ್ನು ಸೂಚಿಸಿ.

Do you think it is feasible to train the executive staff of Department to handle administrative work and ministerial staff to handle executive work? If yes, suggest the ways for the same.

11. ನಿಮ್ಮ ಇಲಾಖೆಯಲ್ಲಿ ಸೇವಾ ವಿತರಣೆ / ಉತ್ಪಾದಕತೆಯನ್ನು ಸುಧಾರಿಸಲು ನೀವು ಯಾವುದೇ ನಿರ್ದಿಷ್ಟ ಸಲಹೆಗಳನ್ನು ಹೊಂದಿದ್ದೀರಾ?

Do you have any specific suggestions to improve service delivery / productivity in your department?

12. ಪ್ರಸ್ತುತ ನಿಮ್ಮ ಇಲಾಖೆಯ ಎಲ್ಲಾ ಚಟುವಟಿಕೆಗಳಿಂದ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ ಹಣಕಾಸಿನ ಕೊಡುಗೆಯ ಒಟ್ಟು ಮೊತ್ತ ಎಷ್ಟು?

What is presently the total quantum of annual financial contribution to the State exchequer from all activities of your department?

13. ನಿಮ್ಮ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ ಹಣಕಾಸಿನ ಕೊಡುಗೆಯನ್ನು ಹೆಚ್ಚಿಸಲು ಅವಕಾಶವಿದೆಯೇ? ಹಾಗಿದ್ದಲ್ಲಿ, ದಯವಿಟ್ಟು ವಿವರಗಳನ್ನು ಒದಗಿಸಿ

    Is there scope for increasing the annual financial contribution from your department to the state exchequer? If so, please provide details.

14. ನಿಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ರಾಜ್ಯದ ಆದಾಯವನ್ನು ಹೆಚ್ಚಿಸಲು ಅವಕಾಶವಿರುವ ಯಾವುದೇ ಹೊಸ ಯೋಜನೆ / ಕಾರ್ಯಕ್ರಮಗಳನ್ನು ಸೂಚಿಸಬಹುದೇ? ಅಂತಹ ಪ್ರತಿಯೊಂದು ಯೋಜನೆ ಮತ್ತು ಕಾರ್ಯಕ್ರಮದಿಂದ ದೊರೆಯಬಹುದಾದ ಕೊಡುಗೆಯ ಅಂದಾಜು ಏನು?

    Can you suggest any new scheme and programs in your department which has the scope for augmenting the revenues of the state? What will be the estimated contribution from each such scheme and program?

15. ನಿಮ್ಮ ಇಲಾಖೆಯ ಅಧಿಕಾರ ವ್ಯಾಪ್ತಿಗೆ ಬರುವ ಅಧಿನಿಯಮ ಮತ್ತು ನಿಯಮಗಳ ಯಾವ ಅವಕಾಶಗಳನ್ನು ಇದುವರೆಗೂ ಜಾರಿಗೆ ತರಲಾಗಿಲ್ಲ? ಯಾವುದಾದರೂ ಇದ್ದರೆ, ಅಂತಹ ಉಪಬಂಧಗಳ ವಿವರಗಳನ್ನು ಮತ್ತು ಅದನ್ನು ಜಾರಿಗೊಳಿಸುವ ಮೂಲಕ ರಾಜ್ಯದ ಬೊಕ್ಕಸಕ್ಕೆ ಹಣಕಾಸಿನ ಹರಿವನ್ನು ಹೇಗೆ ಹೆಚ್ಚಿಸಬಹುದು ಎಂಬ ವಿವರಗಳನ್ನು ಸಲ್ಲಿಸಿ.

    Are there any provisions in the Acts and Rules presently within the jurisdiction of your department which are not given effect to as of now? If any, list the provisions, along with how effecting the same may enhance the financial flow to the state exchequer.

16. ನಿಮ್ಮ ಇಲಾಖೆಗೆ ಅನ್ವಯವಾಗುವ ಪ್ರಚಲಿತ ಕಾನೂನುಗಳನ್ನು ಅನುಷ್ಠಾನಗೊಳಿಸಿದ ಅನುಭವದೊಂದಿಗೆ ರಾಜ್ಯ ಸರ್ಕಾರಕ್ಕೆ ಆದಾಯದ ಹೊಸ ಮೂಲಗಳನ್ನು ಹುಡುಕಲು ಸಹಾಯ ಮಾಡುವ ಯಾವುದಾದರೂ ಹೊಸ ಕಾನೂನುಗಳು ಅಥವಾ ನಿಯಮಗಳನ್ನು ಸೂಚಿಸುತ್ತೀರಾ?

    Given your experience of implementing the present laws applicable to your department, would you suggest any new laws or rules, which would help in tapping new sources of revenue for the State Government?

17. ಉದ್ಯೋಗಿಗಳ ದಕ್ಷತೆ, ಉತ್ಪಾದಕತೆ ಮತ್ತು ಪ್ರಾಮಾಣಿಕತೆಯನ್ನು ಅವರ ಸಂಬಳ ಮತ್ತು ಇತರ ಭತ್ಯೆಗಳ ಹೆಚ್ಚಳಕ್ಕೆ ಹೇಗೆ ಹೊಂದಿಸಬಹುದು ಎಂದು ನೀವು ಭಾವಿಸುತ್ತೀರಿ

    How do you think the efficiency, productivity, and honesty of the employees could be linked to the enhancement of their salaries and other allowances?

18. ನೌಕರರುಗಳಿಗೆ ತಮ್ಮ ಸೇವಾವಧಿಯಲ್ಲಿ ಅವರ ಶೈಕ್ಷಣಿಕ ವಿದ್ಯಾರ್ಹತೆ / ತಾಂತ್ರಿಕ ಕೌಶಲ್ಯಗಳನ್ನು ಉತ್ತಮಗೊಳಿಸಿಕೊಳ್ಳಲು ಯಾವ ರೀತಿಯ ಅನುಕೂಲ ಅಥವಾ ಸಹಾಯವನ್ನು ಒದಗಿಸಬೇಕು?

    What facilities or support should be given to employees to improve their educational qualifications / technical skills during their service?

19. ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ನೌಕರ ಮತ್ತು ಇಲಾಖಾ ಘಟಕಗಳನ್ನು ಗುರುತಿಸಲು ಮತ್ತು ಬಹುಮಾನಿಸಲು ತಾವು ಯಾವ ರೀತಿಯ ಪ್ರೋತ್ಸಾಹಕಗಳನ್ನು ಸಲಹೆ ಮಾಡುತ್ತೀರಿ?

What kind of incentives do you suggest to recognize and reward outstanding performance by individual employees and units of organizations?

20. ಪಿಂಚಣಿ / ನಿವೃತ್ತಿ ಉಪದಾನ / ಕುಟುಂಬ ವಿಶ್ರಾಂತಿ ವೇತನ / ಪಿಂಚಣಿಯ ಪರಿವರ್ತನೆಗಳನ್ನು ನಿರ್ಧರಿಸಲು ಚಾಲ್ತಿಯಲ್ಲಿರುವ ಸೂತ್ರವು ಯುಕ್ತ ಹಾಗೂ ಸಮರ್ಪಕವೆಂದು ತಾವು ಭಾವಿಸುತ್ತೀರಾ? ಇಲ್ಲದಿದ್ದಲ್ಲಿ, ಸೂಕ್ತ ಸಮರ್ಥನೆಯೊಂದಿಗೆ ನಿಮ್ಮ ಸಲಹೆಗಳನ್ನು ನೀಡಿರಿ.

Do you feel that the existing formulae adopted for determining pension/gratuity/ family pension/ commutation of pension are adequate and appropriate? If not, offer your suggestions along with appropriate justifications.

21. ರಾಷ್ಟ್ರೀಯ ಪಿಂಚಣಿ ಯೋಜನೆ (NPS) ಅನುಷ್ಠಾನದ ಕುರಿತು ನೀವು ಯಾವುದೇ ಅಭಿಪ್ರಾಯಗಳನ್ನು ಹೊಂದಿದ್ದೀರಾ?

Do you have any comments to make on the implementation of the National Pension Scheme (NPS)?

22. ಆಯೋಗಕ್ಕೆ ವಹಿಸಲಾಗಿರುವ ಪರಿಶೀಲನಾಂಶಗಳಿಗೆ ಸಂಬಂಧಿಸಿದಂತೆ, ಅಂಶಗಳ ಕುರಿತು ಸಲಹೆಗಳು ಇದ್ದಲ್ಲಿ, ದಯವಿಟ್ಟು ಅವುಗಳನ್ನು ಕೆಳಗೆ ಸೂಚಿಸಿ.

If you have suggestions on any other matter covered by the terms of reference of the Commission, please give them below

| | |
|---|---|
| ಸಹಿ<br>Signature | |
| ದಿನಾಂಕ<br>Date | |
| ಹೆಸರು ಮತ್ತು ಪದನಾಮ<br>Name and Designation | |
| ವಿಳಾಸ<br>Address | |
| ಇ – ಮೇಲ್ ಐಡಿ<br>E-mail ID | |
| ದೂರವಾಣಿ ಸಂಖ್ಯೆ<br>Telephone Number | |

| ಕ್ರ ಸಂ.<br>SN | ಹುದ್ದೆಯ ಹೆಸರು | ಹುದ್ದೆಯ ಒಟ್ಟು ಸಂಖ್ಯೆ | | ವೇತನ ಶ್ರೇಣಿ | ಭರ್ತಿಯಾದ ಹುದ್ದೆ | ಖಾಲಿಯಿರವ ಹುದ್ದೆ | ವಿಶೇಷ ಭತ್ಯೆ, ವಿಶೇಷ ವೇತನ, ನಿಗದಿತ ಪ್ರಯಾಣ ಭತ್ಯೆ, ವಾಹನ ಭತ್ಯೆ, ಮುಂತಾದವುಗಳು |
|---|---|---|---|---|---|---|---|
| | | ಖಾಯಂ | ತಾತ್ಕಾಲಿಕ | | | | |
| 1 | 2 | 3 | 4 | 5 | 6 | 7 | 8 |
| | | | | | | | |

ಇಲಾಖೆಯ ಹೆಸರು:

Name of the Department:

| ಕ್ರ.ಸಂ<br>SN | ವೃಂದ<br>Cadre | ಮಂಜೂರಾದ ಹುದ್ದೆ<br>Sanctioned Strength | ಭರ್ತಿಯಾದ ಹುದ್ದೆ<br>Posts Filled | ಖಾಲಿ ಹುದ್ದೆ<br>Vacant Posts | ಷರಾ<br>Remarks |
|---|---|---|---|---|---|
| 1 | 2 | 3 | 4 | 5 | 6 |
| | | | | | |

ಇಲಾಖೆಯ ಹೆಸರು:

Name of the Department:

| ಕ್ರ.ಸಂ<br>SN | ಹುದ್ದೆಯ ಪ್ರವರ್ಗ<br>Cadre | ಸರ್ಕಾರಿ ನೌಕರರ ಒಟ್ಟು ಸಂಖ್ಯೆ<br>Total Working Strength of Government Employees | ಗುತ್ತಿಗೆ /ಒಪ್ಪಂದ ಆಧಾರದ ಮೇಲೆ (ಆರ್ಥಿಕ ವರ್ಷದಲ್ಲಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಒಟ್ಟು ಸಂಖ್ಯೆ)<br>Outsourcing / Contractual basis (Total number engaged in the department in a financial year) | ಸಮಾಲೋಚಕರು (ಆರ್ಥಿಕ ವರ್ಷದಲ್ಲಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಒಟ್ಟು ಸಂಖ್ಯೆ)<br>Consultants (Total number engaged in the department in a financial year) | ಷರಾ<br>Remarks |
|---|---|---|---|---|---|
| 1 | 2 | 3 | 4 | 5 | 6 |
| | | | | | |

| ಪ್ರಶ್ನಾವಳಿ ಸಿ-ಹೆಚ್ ಓಡಿ<br>Questionnaire C- HoD |
|---|

# 7ನೇ ಕರ್ನಾಟಕ ರಾಜ್ಯ ವೇತನ ಆಯೋಗ

# 7TH STATE PAY COMMISSION OF KARNATAKA

## ಇಲಾಖಾ ಮುಖ್ಯಸ್ಥರಿಗೆ ಸಂಬಂಧಿಸಿದ ಪ್ರಶ್ನಾವಳಿ

## QUESTIONNAIRE FOR HEADS OF DEPARTMENTS

**ಪ್ರಶ್ನಾವಳಿಗೆ ಉತ್ತರಿಸುವ ಪ್ರಾಧಿಕಾರದ ವಿವರಗಳು:**

Particulars of the authority replying to the Questionnaire:

ಅ) ಹೆಸರು ಮತ್ತು ಪದನಾಮ:

Name and Designation:

ಆ) ಇಲಾಖೆಯ ಹೆಸರು:

Name of the Department:

ಇ) ಈ ಇಲಾಖೆಯಲ್ಲಿ ಸಲ್ಲಿಸಿದ ಸೇವೆಯ ಅವಧಿ:

Years of service in the present Department:

ಈ) ಕಳೆದ 5 ವರ್ಷಗಳಲ್ಲಿ ಸೇವೆ ಸಲ್ಲಿಸಿದ ಇಲಾಖೆಗಳ ಅಥವಾ ಹುದ್ದೆಗಳ ವಿವರ

Departments served and posts held over the last 5 years:

1. ನಿಮ್ಮ ಇಲಾಖೆಗೆ ಸಂಬಂಧಿಸಿದ ಸಿಬ್ಬಂದಿಯ ವಿವರಗಳನ್ನು ಒದಗಿಸಿ

   Please furnish particulars of employees of your Department regarding:

   ಅ) ದಿನಾಂಕ: 01-04-2022 ರಲ್ಲಿ ಇದ್ದಂತೆ ವೇತನ ಶ್ರೇಣಿಯ ಸಮೇತ ಹುದ್ದೆಗಳ ವಿವರಗಳು, ಕಳೆದ 5 ವರ್ಷಗಳಲ್ಲಿ ಮಂಜೂರಾಗಿರುವ ಹುದ್ದೆಗಳು, ಖಾಲಿ ಇರುವ ಹುದ್ದೆಗಳು ಇತ್ಯಾದಿಗಳ ಜಿಲ್ಲಾವಾರು ಮತ್ತು ವೃಂದಾವಾರು ವಿವರಗಳನ್ನು ಅನುಬಂಧ-1(A) ರಲ್ಲಿ ನೀಡುವುದು.

   Details of posts along with pay scales as on 01-04-2022, posts sanctioned in the last 5 years, vacant posts, district-wise and cadre-wise to be furnished in Annexure-1(A).

ಆ) ಸಿಬ್ಬಂದಿಯ ಸಂಖ್ಯೆಯಲ್ಲಿ ಹೆಚ್ಚಳ ಇದಲ್ಲಿ, ದಯವಿಟ್ಟು ನಿಮ್ಮ ಇಲಾಖೆಗೆ ಹಂಚಿಕೆ ಮಾಡಲಾದ ಹೊಸ / ಹೆಚ್ಚುವರಿ ಕಾರ್ಯಗಳು ಮತ್ತು ಜವಾಬ್ದಾರಿಗಳ ವಿವರಗಳನ್ನು ಮತ್ತು ಈ ಉದ್ದೇಶಕ್ಕಾಗಿ ಸೃಜಿಸಲಾದ ಹೆಚ್ಚುವರಿ ಹುದ್ದೆಗಳ ವಿವರಗಳನ್ನು ಅನುಬಂಧ-1(B) ನಲ್ಲಿ ಒದಗಿಸುವುದು.

If there is increase in the number of employees, please furnish the details of new / additional functions and responsibilities assigned to your Department and details of additional posts created for the purpose in Annexure-1(B).

ಇ) ಗುತ್ತಿಗೆ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ಅನುಬಂಧ - 1(C) ರಲ್ಲಿ ಒದಗಿಸುವುದು.

Person engaged on a contract / outsourcing basis in Annexure -1(C)

2. ನಿಮ್ಮ ಇಲಾಖೆಯಲ್ಲಿರುವ ವಿವಿಧ ವೃಂದಗಳಲ್ಲಿನ ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆ, ನೇಮಕಾತಿ ವಿಧಾನ, ಕಾರ್ಯಸ್ವರೂಪ ಇತ್ಯಾದಿ ವಿವರಗಳನ್ನು ಅನುಬಂಧ-II ರಲ್ಲಿ ಒದಗಿಸುವುದು. ಇಲಾಖೆಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನು ಒದಗಿಸುವುದು.

   Please furnish details of staff deployed, educational qualifications, method of recruitment, and nature of work fixed for various cadres of posts in your Department in Annexure-II. Please furnish a copy of the Department Cadre and Recruitment Rules.

3. ವಿವಿಧ ಹುದ್ದೆಗಳ ಹಂತಗಳನ್ನು ತೋರಿಸುವ ನಿಮ್ಮ ಇಲಾಖೆಯ ಸಂಸ್ಥಾ ನಕ್ಷೆಯನ್ನು ಲಗತ್ತಿಸುವುದು.

   Enclose the organogram of your department that shows the relative positions of various posts.

4. ನಿಮ್ಮ ಇಲಾಖೆಯ ಹಾಗೂ ಇನ್ನಿತರೆ ಯಾವುದೇ ಇಲಾಖೆಯ ಕಾರ್ಯ ಚಟುವಟಿಕೆಗಳು ಮೇಲು ವ್ಯಾಪನವಾಗಿರುವುದು (Overlap) ತಮ್ಮ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಅಂತಹ ವ್ಯಾಪನವು ಎಷ್ಟು ಅನಿವಾರ್ಯ ಹಾಗೂ ಎಷ್ಟರ ಮಟ್ಟಿಗೆ ಅದನ್ನು ಕಡಿಮೆ ಮಾಡಬಹುದು.

   Have you noticed any overlap between the functions of your department with any functions of other departments? If so, how much of such overlap is inevitable and how can such overlap be minimized?

5. ನಿಮ್ಮ ಇಲಾಖೆಯಲ್ಲಿನ ಸಿಬ್ಬಂದಿಗಳು ಇತರ ಇಲಾಖೆಗಳಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದರೆ ಅಂತಹ ಸಿಬ್ಬಂದಿಗಳ ಪ್ರವರ್ಗವಾರು ಸಂಖ್ಯೆ ಎಷ್ಟು?

   Please provide, group-wise, the number of staff of your department working on deputation in other departments.

6. ನಿಮ್ಮ ಇಲಾಖೆಯಲ್ಲಿ ಹಾಲಿ ಇರುವ ವಿವಿಧ ಹುದ್ದೆಗಳಿಗೆ ಮಂಜೂರಾಗಿರುವ ವೇತನ ಶ್ರೇಣೀಗಳು (ವಿಶೇಷ ಭತ್ಯೆಯೂ ಸೇರಿ) ಸಮಂಜಸವಾಗಿದೆಯೆಂದು ಭಾವಿಸುವಿರಾ? ಹಾಗಿಲ್ಲದಿದ್ದಲ್ಲಿ, ಯಾವ ಹುದ್ದೆಗಳಿಗೆ/ಯಾವ ವೃಂದದ ವೇತನ ಶ್ರೇಣಿಗಳ ಪರಿಷ್ಕರಣೆಯ ಅಗತ್ಯವಿದೆ? ಪ್ರಸ್ತಾವಿತ ಪರಿಷ್ಕರಣೆಗೆ ಆಧಾರಗಳನ್ನು ತಿಳಿಸಿ.

   Do you feel that the pay scales (including special allowances) assigned to different categories of posts in your department are reasonable? If not, which are the posts for which pay scales need to be revised? Please indicate the basis for the recommended revision.

